ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಮಂಗಳವಾರ 25ನೇ ಫೆಬ್ರುವರಿ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ

(ಅ) ರಾಜ್ಯದ ಆದಾಯದ ಮೇಲೆ ಪರಿಣಾಮವನ್ನು ಬೀರತಕ್ಕಂಥ ಕಾನೂನನ್ನು ಸರ್ಕಾರ ಹೊಸದಾಗಿ ರೂಪಿಸುತ್ತಿರುವುದು

ಅಧ್ಯಕ್ಷರು : ಮಾನ್ಯ ಖರ್ಗೆಯವರೇ ನಿಮ್ಮ ನಿಲುವಳಿ ಸೂಚನೆಯನ್ನು ಪ್ರಾರಂಭಿಸಿ, ಏಕೆಂದರೆ ಇವತ್ತು ಪ್ರಶ್ನೋತ್ತರವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಇದ್ದಿದ್ದರೆ ಚೆನ್ನಾಗಿತ್ತು

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಒಂದು ನಿಮಿಷದಲ್ಲಿ ಬರುತ್ತಾರೆ ನೀವು ಪ್ರಾರಂಭಿಸಿ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದು ಬಹಳ ಮಹತ್ವದ್ದು ಮತ್ತು ರಾಜ್ಯದ ಆದಾಯದ ಮೇಲೆ ಹೆಚ್ಚು ಪರಿಣಾಮವನ್ನು ಬೀರತಕ್ಕಂಥ ಕಾನೂನನ್ನು ಸರ್ಕಾರ ಏನು ಹೊಸದಾಗಿ ರೂಪಿಸುತ್ತಿದೆ, ಅದನ್ನು 30-12-96ರಲ್ಲಿ ಅಬಕಾರಿ ಇಲಾಖೆಯಲ್ಲಿ ತಂದು, ಆ ಇಲಾಖೆಯಿಂದ ಬರತಕ್ಕಂಥ ಆದಾಯಕ್ಕೆ ಇವರು ಅಡಚಣೆ ಮತ್ತು ತೊಂದರೆ ಉಂಟು ಮಾಡುತ್ತಿದ್ದಾರೆ. ಸರ್ಕಾರವು ದಿನಾಂಕ: 13-9-89ರಲ್ಲಿ ಒಂದು ವಿಶೇಷಾಜ್ಞೆಯನ್ನು ಹೊರಡಿಸಿ ಸಗಟು ಮದ್ಯ ವಿತರಣಾ ವ್ಯವಸ್ಥೆಯನ್ನು ಸರ್ಕಾರೀ ಸ್ವಾಮ್ಯದ ಎಂ.ಎಸ್.ಐ.ಎಲ್.ಗೆ ವಹಿಸಿತ್ತು. ಇದರ ವಿರುದ್ಧ ಡಿಸ್ಟಿಲರಿ ಮಾಲೀಕರು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಹಾಕಿದ್ದರು. ಸುಪ್ರೀಂ ಕೋರ್ಟ್ ತೆರಿಗೆಗಳ್ಳತನ ತಪ್ಪಿಸುವ ಸಲುವಾಗಿ ತೆಗೆದುಕೊಂಡ ಸರ್ಕಾರದ ಈ ಕ್ರಮವನ್ನು ಎತ್ತಿಹಿಡಿದು, ದಿನಾಂಕ 19-12-95 ರಲ್ಲಿ ತನ್ನ ತೀರ್ಪುನೀಡಿತು. ಆ ತೀರ್ಪಿನ ಆಧಾರದಮೇಲೆ ಸರ್ಕಾರ ಮದ್ಯ ಮಾರಾಟದ ಏಕ ಸ್ವಾಮ್ಯತೆಯನ್ನು ಪುನಃ ಪರಿಶೀಲಿಸಿ ಈಗ ಹೊಸ ಒಂದು ಆಜ್ಞೆಯನ್ನು ಹೊರಡಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಿದೆ. ನಾನು ಹೇಳುವಂತಹ ಉದ್ದೇಶವೇನೆಂದರೆ, ಈಗಾಗಲೇ ಅಬಕಾರಿ ಬಗ್ಗೆ ಸಾಕಷ್ಟು ಮಾತುಕತೆಗಳು ಊಹಾಪೋಹಗಳು ನಡೆದಿವೆ. ಸುಮಾರು 770-800 ಕೋಟಿ ಆದಾಯ ಬರತಕ್ಕಂಥ ಅಬಕಾರಿ

ಬಾಜ್ತಿನಲ್ಲಿ ಈ ವರ್ಷ ಕೂಡ ಅವರು ಅಪೇಕ್ಷೆ ಮಾಡಿದ್ದು 850 ಕೋಟಿ ರೂಪಾಯಿ. ಅದು ಎಂ.ಎಸ್.ಐ.ಎಲ್. ಸೋಲ್ ಏಜೆಂಟ್ ಇದ್ದ ಕಾರಣ ಅಷ್ಟೊಂದು ಅಂದಾಜನ್ನು ಇವರು ಮಾಡಿಕೊಂಡಿದ್ದರು. ಈ ಮಧ್ಯೆ ಸಾರಾಯಿ ನಿಷೇಧವನ್ನು ಹಂತಹಂತವಾಗಿ ತರುತ್ತೇವೆಂದು, ಅದರಿಂದ ಸುಮಾರು 500 ಕೋಟಿ ಲುಕ್ಸಾನ್ ಆಗುತ್ತದೆಂದು ಅನೇಕ ಸಾರಿ ಹೇಳಿದ್ದಾರೆ. ಹೀಗಿರುವಾಗ ಐ.ಎಂ.ಎಫ್.ಎಲ್. ಬಗ್ಗೆ ಸರ್ಕಾರದ ಆಸಕ್ತಿ ಏತಕ್ಕೆ ಹೆಚ್ಚಿತು? ಒಂದು ಕಡೆ ಈ ಬಿಗುವನ್ನು ಇಟ್ಟು 1989ರಲ್ಲಿಯೇ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ರಾಜಶೇಖರ ಮೂರ್ತಿಯವರು ಅಬಕಾರಿ ಮಂತ್ರಿಯಾಗಿದ್ದಾಗ ಒಂದು ತಿದ್ದುಪಡಿಯನ್ನು ತಂದರು. ರೂಲ್ 3ಆಫ್ ಕರ್ನಾಟಕ ಎಕ್ಸೈಜ್ ಸೇಲ್ ಆಫ್ ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್ ರೂಲ್ಸ್ 1968. ಸಬ್‌ಕ್ಲಾಸ್ (ಬಿ) ಆಫ್ ಕ್ಲಾಸ್11 ಇದಕ್ಕೆ ತಿದ್ದುಪಡಿ ತಂದು ಅವರು ಎಂ.ಎಸ್.ಐ.ಎಲ್. ಮುಖಾಂತರ ಇದರ ಸೋಲ್ ಏಜೆಂಟ್ ಎಂದು ಮಾಡಿದಿದ್ದರೆ, ಇವತ್ತು ಡಿಸ್ಟಿಲರಿಗಳಲ್ಲಿ ಸೆಕೆಂಡ್ ಎಂದು ಏನು ಹೋಗುತ್ತಿದೆ, ಅಂದರೆ ಎಕ್ಸೈಜ್ ಡ್ಯೂಟಿ ಕೊಡದೆ, ಮಾರಾಟ ತೆರಿಗೆ ಕೊಡದೆ ಮತ್ತು ಹಾಕಿದಂತಹ ಟ್ಯಾಕ್ಸ್ ಮತ್ತು ಶುಲ್ಕಗಳನ್ನು ಕೊಡದೇ ಅದನ್ನು ತಪ್ಪಿಸಿ ನೇರವಾಗಿ ಡಿಸ್ಟಿಲರಿಯಿಂದಲೇ ಏನು ಮಾರುಕಟ್ಟೆಗೆ ಬರುತ್ತಿತ್ತು, ಅದನ್ನು ತಡೆಹಿಡಿಯಬೇಕೆಂದು ಹಿಂದಿನ ಸರ್ಕಾರ ಒಂದು ಕ್ರಮವನ್ನು ತೆಗೆದುಕೊಂಡಿತ್ತು. ಅದಕ್ಕೆ ತದ್ವಿರುದ್ಧವಾಗಿ ರಾಜ್ಯದಲ್ಲಿ ಯಾರಿಗೆ ತೊಂದರೆಯಾಗಿತ್ತೋ, ಸುಮಾರು 80-90 ಡಿಸ್ಟಿಲರಿ ಮಂದಿಯ ಪೈಕಿ, ಕೇವಲ 11 ಡಿಸ್ಟಿಲರಿ ಮಾಲೀಕರು ಮಾತ್ರ ನೇರವಾಗಿ ಎಂ.ಎಸ್.ಐ.ಎಲ್. ಕೊಡತಕ್ಕಂಥದ್ದು, ಮತ್ತು ಕೆಲವು ಜನ ಭಾಗಶಃ ಕೊಡುತ್ತಿದ್ದರು. ಕೆಲವು ಜನರಂತೂ ಕೊಡುತ್ತಾ ಇರಲಿಲ್ಲ. ಹೀಗಿದ್ದಾಗಲೂ ಕೂಡ ಕೆಲವು ಜನ ಡಿಸ್ಟಿಲರಿ ಮಾಲೀಕರು ಹೈಕೋರ್ಟ್‌ನಲ್ಲಿ ಒಂದು ಸ್ಟೇ ಆರ್ಡರನ್ನು ತಂದುಕೊಂಡಮೇಲೆ, ಸರ್ಕಾರದವರು ಅದರ ವಿರುದ್ಧ ಫೈಟ್ ಮಾಡಿ ಸ್ಟೇ ಅನ್ನು ತೆರವು ಮಾಡಿಸಿದರು. ಸ್ಟೇ ಆರ್ಡರ್ ತೆರವು ಆದಮೇಲೆ ಡಿಸ್ಟಿಲರಿ ಮಾಲೀಕರು ಸುಪ್ರೀಂ ಕೋರ್ಟಿಗೆ ಹೋದರು. ಇದು ನಮಗೆ ಅನ್ಯಾಯವಾಗುತ್ತದೆ ಇದರಿಂದ ನಮ್ಮ ವ್ಯಾಪಾರಕ್ಕೆ ತೊಂದರೆಯಾಗುತ್ತದೆ. ಇದು ವಿಧಾನಸಭೆಯಲ್ಲಿ ಚರ್ಚೆಯಾಗಿಲ್ಲ, ಹೊಸದಾಗಿ ರೂಲ್ಸ್ ಅನ್ನು ವಜಾ ಮಾಡಬೇಕೆಂದು ರಿಟ್ ಅರ್ಜಿಯನ್ನು ವಿಶೇಷವಾಗಿ ಖೋಡೆ ಕಂಪನಿಯವರು, ಬೇರೆಯವರೆಲ್ಲ ಸೇರಿ ಇದನ್ನು ಹಾಕಿದರು. ಹಾಕಿದಮೇಲೆ ಸುಪ್ರೀಂ ಕೋರ್ಟ್ ಕೂಡ ಸರ್ಕಾರ ಏನು ಅಜ್ಜೆ ಮಾಡಿತ್ತೋ, ಏನು ತಿದ್ದುಪಡಿ ತಂದಿತ್ತೋ ಅದು ಸರಿಯಾಗಿದೆ ಏಕೆಂದರೆ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಆದಾಯ ಕಡಿಮೆಯಾಗದಂತೆ ತನ್ನ ಆದಾಯವನ್ನು ಸಂಗ್ರಹಿಸಿಕೊಳ್ಳುವುದಕೆ ಯಾವುದೇ ಕಾನೂನನ್ನು ತರದಿದ್ದರೆ, ಅದು ಸರಿ ಅದನ್ನು ನಾವು ಎತ್ತಿ ಹಿಡಿಯುತ್ತೇವೆಂದು ಸುಪ್ರೀಂ ಕೋರ್ಟ್ ಹೇಳಿತು. ಅವರು ಎತ್ತಿ ಹಿಡಿದ ಮೇಲೂ ಕೂಡ ಇವತ್ತಿನ ದಿವಸ ಪುನಃ ಸರ್ಕಾರ ಅದಕ್ಕೆ ಮರು ಪರಿಶೀಲನೆ ಮಾಡಿ ಹೊಸ ರೂಲ್ಸ್ ರಚಿಸಿ ಎಂ.ಎಸ್.ಐ.ಎಲ್ ಅನ್ನು ಸೋಲ್ ಏಜೆಂಟ್ ಎಂದು ಏನು ಮಾಡಲಾಗಿತ್ತೋ ಅದನ್ನು ತಪ್ಪಿಸಿ ಬೇರೆ ಖಾಸಗಿಯವರಿಗೂ ಕೂಡ ಅದನ್ನು ಕೊಡಬಹುದು ಎನ್ನತಕ್ಕಂಥ ಕಾನೂನು ಮಾಡುವ ಅವಶ್ಯಕತೆ ಏನಿದೆ? ಏಕೆಂದರೆ ಆ ನೀತಿಯಿಂದಲೇ ಅಬಕಾರಿ ಇಲಾಖೆಯಿಂದ ಹೆಚ್ಚಿನ ಹಣಸಂಗ್ರಹ ಮಾಡುವುದಕ್ಕೆ ಸಾಧ್ಯವಾಗಿದೆ. ಹಿಂದೆ ಸುಮಾರು 2 ರೂಪಾಯಿ ಪ್ರತಿ ಲೀಟರ್‌ಗೆ ಇದ್ದಿದ್ದು ಅದು 20 ರೂಪಾಯಿ ನಂತೆ ಪರಿಷ್ಕೃತ ಸ್ಪಿರಿಟ್ ಮಾರಿದಾಗ ಸುಮಾರು

ಸಾಕಷ್ಟು ಸೆಕೆಂಡ್ಸ್ ಹೋಗುತ್ತಿದ್ದುದು ನಿಂತಿತ್ತು. ಇದು 1989ರಲ್ಲಿ ಆದರ ನಂತರವೂ ಕೂಡ ಒಂದೊಂದು ಕ್ರಮವೆಂದರೆ ಎಂ.ಎಸ್.ಐ.ಎಲ್.ನಲ್ಲಿಯೂ ಕೂಡ ಸೋಲ್ ಎಜೆಂಟ್ ಎಂದು ಕೊಟ್ಟರೆ, ಡೈರೆಕ್ಟಾಗಿ ಡಿಸ್ಟಿಲರಿಯಿಂದ ಹೋಗುವುದಿಲ್ಲ. ಯಾರೇ ತೆಗೆದುಕೊಳ್ಳಬೇಕಾದರೆ ಸೀಲ್ ಹಾಕಿದ್ದಾಗ ಮಾತ್ರ ಇದು ಅಧಿಕೃತವಾದದ್ದು. ಅದು ಫ್ಯಾಕ್ಟರಿಯಿಂದ ಬಂದಿದೆ, ಅದರ ಅಬಕಾರಿ ಸುಂಕಪಾವತಿಯಾಗಿದೆ. ಮಾರಾಟ ತೆರಿಗೆ ಪಾವತಿಯಾಗಿದೆ ಎಂದು ಗೊತ್ತಾಗಲಿ ಎಂದು ಸೀಲ್ ಹಾಕಿದ್ದನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಇತ್ತು. ಅದರಿಂದ ಸರ್ಕಾರ ನೂರಾರು ಕೋಟಿ ರೂಪಾಯಿ ಲಾಭ ಗಳಿಸುತ್ತಿತ್ತು. ಅವರೂ ಕೂಡ 100 ಕೋಟಿ ರೂಪಾಯಿ ಬಹಿವಾಟು ಮಾಡಿ 10-12 ಕೋಟಿ ಲಾಭ ಮಾಡಿದಂತಹ ಉದಾಹರಣೆ ಇದೆ. ಎಂ.ಎಸ್.ಐ.ಎಲ್. ರಿಪೋರ್ಟ್‌ನಲ್ಲಿ ಅದು ಸಮೂದಾಗಿದೆ. ಹೀಗಿರುವಾಗ ಸರ್ಕಾರಕ್ಕೆ ಏನು ಕಷ್ಟ ಬಂದಿತ್ತು, ಈ ರೂಲ್ಸ್ ತಿದ್ದುಪಡಿ ಮಾಡಿ ಪುನಃ ಹೊಸ ರೂಲ್ಸ್ ಅನ್ನು ರಚಿಸುವಂತಹ ಅವಶ್ಯಕತೆ ಏಕೆ ಬಂತು? ಇದು ಯಾರಿಗೆ ಸಹಾಯ ಮಾಡುವುದಕ್ಕೋಸ್ಕರ? ಏಕೆಂದರೆ ಇವತ್ತು 89 ಡಿಸ್ಟಿಲರಿಯವರಿಗೆ ಒತ್ತಾಯಮಾಡಿ, ನೇರವಾಗಿ ನೀವೆಲ್ಲ ಎಂ.ಎಸ್.ಐ.ಎಲ್. ನಿಂದಲೇ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದರೆ, ಖಂಡಿತವಾಗಿ ಸರ್ಕಾರಕ್ಕೆ ಸುಮಾರು 480 ಕೋಟಿ ರೂಪಾಯಿ ಬರುತ್ತದೆ ಎಂಬ ಮಾಹಿತಿ ನಮ್ಮ ಹತ್ತಿರ ಇದೆ. 40 Distilleries are identified which are selling seconds. ಅಂದರೆ, 89 ಡಿಸ್ಟಿಲರಿಗಳಲ್ಲಿ 40 ಡಿಸ್ಟಿಲರಿಗಳು ಇವೊತ್ತು ಸೆಕೆಂಡ್ಸ್ ಅನ್ನು ಕಳುಹಿಸುತ್ತಿರೆ. ಆ 40 ಡಿಸ್ಟಿಲರಿಗಳಲ್ಲಿ ಪರ್ ಕೇಸ್‌ಗೆ ಎಂಟು ನೂರು ರೂಪಾಯಿಗಳಂತೆ, ಅವರ ಒಂದು ರೇಟಿನ ಪ್ರಕಾರ ಹಿಡಿದರೂ ಕೂಡ ತಿಂಗಳಿಗೆ ಕೋಟಿ ರೂಪಾಯಿಗಳಾಗುತ್ತದೆ. ಅಂದರೆ, ವರ್ಷಕ್ಕೆ ಸುಮಾರು 480 ಕೋಟಿ ರೂಪಾಯಿಗಳು. ಇದು ಅವರೇ ಕೊಟ್ಟಿರುವಂಥ ಅಂಕಿ ಸಂಖ್ಯೆಗಳು. ಏಕೆಂದರೆ, ಎಂ.ಎಸ್.ಐ.ಎಲ್.ಗೆ ಪ್ರತಿ ತಿಂಗಳು ಅವರು ಸರಬರಾಜು ಮಾಡುತ್ತಿರುವುದು 1.75 ಲಕ್ಷ ಕೇಸಗಳು. ಆದರಲ್ಲಿ ಬರತಕ್ಕಂಥ ಆದಾಯವನ್ನು ನಾವು ಲೆಕ್ಕಕ್ಕೆ ತೆಗೆದುಕೊಂಡಾಗ, ಮತ್ತು ಇವೊತ್ತು ಸುಮಾರು ಐದು ಲಕ್ಷ ಕೇಸಸ್ ಸೆಕೆಂಡ್ಸ್‌ನಲ್ಲಿ ಹೋಗುವಾಗ ಆ ಲೆಕ್ಕವನ್ನೂ ತೆಗೆದುಕೊಂಡಾಗ ಸುಮಾರು 400-500 ಕೋಟಿ ರೂಪಾಯಿಗಳಷ್ಟಾಗುತ್ತದೆ. ಇದು ಅತಿಶಯೋಕ್ತಿಯ ಅಂಕಿ-ಅಂಶಗಳಿಂದು, ಇಲ್ಲವೇ ಟೀಕೆಗೋಸ್ಕರ ನಾವು ಹೇಳುತ್ತೇವೆಂದರೆ ತಾವೇ ಹೇಳಿ. ಆ ಡಿಸ್ಟಿಲರಿಗಳಿಂದ ಮ್ಯಾನ್ಯುಫ್ಯಾಕ್ಚರಿಂಗ್ ಎಷ್ಟಿದೆ? ಕ್ವಾಂಟಿಟಿ ಎಷ್ಟಿದೆ? ಪ್ರೊಡಕ್ಷನ್ ಹಂತದಲ್ಲಿ ಇದನ್ನು ಚೆಕ್‌ಅಪ್ ಮಾಡಬೇಕು, ಅಲ್ಲಿಂದ ಯಾವ ಲಾರಿಗಳು ಹೋಗುತ್ತವೋ, ಆ ಲಾರಿಗಳನ್ನು ಚೆಕ್‌ಅಪ್ ಮಾಡಿ ಸೇಲ್ಸ್ ಟ್ಯಾಕ್ಸ್ ಕೊಟಿದ್ದಾರೆಯೇ? ಇಲ್ಲವೇ? ಎಕ್ಸೈಸ್ ಡ್ಯೂಟಿ ಕೊಟ್ಟಿದ್ದಾರೆಯೇ? ಇಲ್ಲವೇ ಎಂಬುದನ್ನು ತಿಳಿದುಕೊಂಡು ಬಿಡುಗಡೆ ಮಾಡಬೇಕಾಗಿರುತ್ತದೆ. ಆದರೆ, ತಮಗೆ ಗೊತ್ತಿರುವಂತೆ ಎಷ್ಟು ಕಡೆ ಈ ರೀತಿಯಾಗಿ ನಮ್ಮ ಡಿವೈಎಸ್‌ಪಿ, ಎಕ್ಸೈಸ್ ಸೂಪರಿಟೆಂಡೆಂಟ್‌ಗಳು, ಇನ್ಸ್‌ಪೆಕ್ಟರಗಳು ಪ್ರಾಮಾಣಿಕವಾಗಿ ಚೆಕ್‌ಅಪ್ ಮಾಡುತ್ತಾರೆನ್ನುವುದು ತಮಗೆ ಗೊತ್ತಿದೆ. ಪ್ರತಿಯೊಂದು ಡಿಸ್ಟಿಲರಿಯಲ್ಲೂ, ಈ ರೀತಿ ಚೆಕ್‌ಅಪ್ ಮಾಡುವುದಕೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ಡಿವೈಎಸ್‌ಪಿ, ಸೂಪರಿಂಟೆಂಡೆಂಟ್, ಇನ್ಸ್‌ಪೆಕ್ಟರ್‌ಗಳು ಇದ್ದರೂ ಸಹ ಇದು ಆಗುತ್ತದೆಂದು ತಿಳಿದುಕೊಂಡು ಕೊನೆಗೆ ಮುಂದಿನ ಮೆಶರ್ಸ ಏನು ತೆಗೆದುಕೊಂಡರೆಂದರೆ ನೇರವಾಗಿ ಬೇರೆ ಪ್ರೈವೇಟ್ ಡಿಸ್ಟಿಲರಿಯವರು ಮಾಡುವುದಕ್ಕಿಂತ ಇವರಿಗೇ ದುಡ್ಡು ಕೊಟ್ಟು ಒಂದು

ಪರ್ಮಿಟ್ ಮೇಲೆ 10-15 ಹೊಡೆದುಕೊಂಡು ಹೋಗುತ್ತಾರೆ. ಆದುದರಿಂದ, ಇದಕ್ಕೂ ಕಂಟ್ರೋಲ್ ಮಾಡಬೇಕೆನ್ನುವ ಉದ್ದೇಶದಿಂದ ಎಂಎಸ್ಐಎಲ್‌ಗೆ ಕೊಟ್ಟಿದ್ದು. ಏಕೆಂದರೆ, ಇಲ್ಲಿ ತಪ್ಪಿ ಹೋದರೂ ಕೂಡ ಕನಿಷ್ಠ ಪಕ್ಷ ಎಂಎಸ್ಐಎಲ್ ಪ್ರಾಡಕ್ಟ್ ಇಲ್ಲಿ ಬಂದಿಲ್ಲ, ಇದು ಸೆಕೆಂಡ್ಸ್ ಇದೆಯೆಂದು ಹೊರಗಡೆ ಇರುವ ಅಂಗಡಿಗಳಲ್ಲಿ ಹಿಡಿಯಲೆಂಬ ಆ ಒಂದು ದೃಷ್ಟಿಯಿಂದ ಎಂಎಸ್ಐಎಲ್‌ಗೆ ಸೋಲ್ ಏಜೆಂಟ್ ಮಾಡಿದ್ದುದು.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಿಂದ ನಿರ್ಗಮಿಸಿದರು.)

ಅಧ್ಯಕ್ಷರು : ನಮ್ಮ ಸಹೋದ್ಯೋಗಿಯೊಬ್ಬರ ಆರೋಗ್ಯ ಸಂಪೂರ್ಣ ಹದಗೆಟ್ಟಿದ್ದು ಅವರು ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವುದಿಂದ ಅವರನ್ನು ನೋಡಿಕೊಂಡು ಬರಲು ಮುಖ್ಯಮಂತ್ರಿಗಳು ಹೋಗುತ್ತಿವ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವೊತ್ತಿನ ದಿವಸ ನಾನು ಕಳಕಳಿಯಿಂದ ಕೇಳಿಕೊಳ್ಳುವಂತಾದ್ದು ಇಷ್ಟೆ. ಇದು ಅಲ್ಲಿದ್ದರೂ ಕೂಡ ಏಕೆ ಕಳ್ಳತನವಾಗುತ್ತಿದೆ?ಬೇಕಾದರೆ ಪ್ರೊಡಕ್ಷನ್ ಹಂತದಲ್ಲಿ ಎಕ್ಸೈಸ್ ಡ್ಯೂಟಿ, ಸೇಲ್ಸ್ ಟ್ಯಾಕ್ಸ್ ಎಲ್ಲವನ್ನೂ ನಾವು ಕರೆಕ್ಟ್ ಮಾಡಿದರೆ ಸ್ವಲ್ಪಮಟ್ಟಿಗೆ ತಡೆಹಿಡಿಯಬಹುದು. ಅಲ್ಲಿ ಕೊಟ್ಟಿದ್ದಾರೆಯೇ? ಬಿಟ್ಟಿದ್ದಾರೆಯೇ? ಎಂಬುದನ್ನು ನೋಡಿಕೊಳ್ಳಲೆಂದು ಎಕ್ಸೈಸ್ ಇಲಾಖೆಯವರಿಗೆ ವಹಿಸಿದರೆ, ಈ ಇಲಾಖೆ ಬಗ್ಗೆ ತಮಗೆ ಗೊತ್ತಿರುವಂತೆ ಅಲ್ಲಿರುವ ಅಧಿಕಾರಿಗಳಲ್ಲಿ ನೂರಕ್ಕೆ ಶೇಕಡ 10, 15ರಷ್ಟು ಪ್ರಾಮಾಣಿಕರಿರಬಹುದು. ಆದರೆ, ಶೇಕಡ 90ರಷ್ಟು ಜನ.....

ಅಧ್ಯಕ್ಷರು : ತಮಗೆ ಗೊತ್ತಿದೆ, ತಮಗೆ ಗೊತ್ತಿದೆ ಎಂದು ನೀವು ಅಭ್ಯಾಸಬಲದಿಂದ ಹೇಳುತ್ತಿದ್ದಿರೋ ಇಲ್ಲವೇ ನಂಬಿಕೆಯಿಂದ ಹೇಳುತ್ತಿದ್ದೀರೋ? ಏನೂ ನನಗೆ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 'ತಮಗೆ ಗೊತ್ತಿದೆ', ಎಂದರೆ ಮಾಹಿತಿ ಕೊಡುತ್ತಿರುತ್ತಾರೆ, ತಾವು ಓದುತ್ತಿರುತ್ತೀರಿ, ಪತ್ರಿಕೆಗಳಲ್ಲೂ ನೋಡುತ್ತಿರುತ್ತೀರಿ, ಪ್ರತಿಯೊಂದು ಬಜೆಟ್ ರಿಪೋರ್ಟನ್ನು ಕೂಡ ಓದುತ್ತೀರಿ ಎನ್ನುವ ದೃಷ್ಟಿಯಿಂದ ಹೇಳಿದೆನೇ ವಿನಹ ಮತ್ತೇನೂ ಇಲ್ಲ.

ಅಧ್ಯಕ್ಷರು : ಸ್ಪಷ್ಟೀಕರಣ ಇರಲೆಂದು ನಾನು ಕೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಹೆಚ್ಚು ಪ್ರಮಾಣದಲ್ಲಿ ಇವರಿಗೆ ಸಪ್ಲೈ ಮಾಡತಕ್ಕಂಥವರು ಯಾರು? ಇಂತಹ ಡಿಸ್ಟಿಲರಿಗಳಿಗೆ ಶೇಕಡ 75ರಷ್ಟು ರೆಕ್ಟಿಫೈಡ್ ಸ್ಪಿರಿಟ್ ಅನ್ನು ಸಪ್ಲೈ ಮಾಡತಕ್ಕಂಥವರು ಜೋಗನ್ ಕೆಮಿಕಲ್ ಯೂನಿಟ್‌ಗಳವರು. ಇದರಲ್ಲಿ ಅವರು ಏನು ಮಾಡುತ್ತಾರೆಂದರೆ, ಸರ್ಕಾರದಿಂದ ಎಷ್ಟು ಕ್ವಾಂಟಿಟಿ, ಲೀಟರ್‌ಗಳನ್ನು ತೆಗೆದುಕೊಂದಿರುತ್ತಾರೋ ಅದನ್ನು ಕೊಡಬೇಕಾಗುತ್ತದೆ. ನೀವು ಇಂತಿಷ್ಟು ಕ್ವಾಂಟಿಟಿಯಷ್ಟು ನಮ್ಮಿಂದ ತೆಗೆದುಕೊಂಡಿರಿ. ನೀವು ಒಂದು ಲಕ್ಷ ಲೀಟರ್‌ಗಳಷ್ಟು ತಯಾರಿಸಿರಬೇಕೆಂದು ಹೇಳಿದಾಗ ಆ ಮಾಹಿತಿ ಇರುತ್ತದೆ. ಅದಕ್ಕೋಸ್ಕರ ಅವರು ಏನು ಮಾಡುತ್ತಾರೆಂದರೆ, ಇಲ್ಲಿ ಒಂದು ಲಕ್ಷದಷ್ಟು ಲೀಟರ್ ತೆಗೆದುಕೊಂಡರೆ ನಾಲ್ಕು ಲಕ್ಷ ಲೀಟರ್‌ಗಳಷ್ಟು ಹೊರಗಡೆ ತೆಗೆದುಕೊಳ್ಳುತ್ತಾರೆ. ಯಾರ ಹತ್ತಿರ ತೆಗೆದುಕೊಳ್ಳುತ್ತಾರೆಂದರೆ, ಯಾರು

ಕೆಮಿಕಲ್ ಯೂನಿಟ್ ಎಂದು ನಾಮ್‌ಕಾವಸ್ತಿಗೆ ಬೋರ್ಡ್ ಇಟ್ಟುಕೊಂಡಿರುತ್ತಾರಲ್ಲ, ಅವರ ಹತ್ತಿರ ತೆಗೆದುಕೊಂಡು, ಇಲ್ಲವೇ ಅದು ರೂಪಾಯಿಗಳಷ್ಟು ಜಾಸ್ತಿ ಕೊಟ್ಟು ತೆಗೆದುಕೊಳ್ಳುತ್ತಾರೆ. ಏಕೆಂದರೆ, ಇವೊತ್ತು ಹೊರಗಡೆ ಹೋಗುವ ಸೆಕೆಂಡ್‌ನ ಒಂದೊಂದು ಕೇಸ್ ಹಿಂದೆ ಅವರಿಗೆ ಸಾವಿರಾರು ರೂಪಾಯಿಗಳು ಉಳಿಯುತ್ತವೆಂದರೆ ನೂರಾರು ರೂಪಾಯಿ ಕೊಟ್ಟು ಬ್ಲಾಕ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ಅವರಿಗೇನೂ ತೊಂದರೆಯಾಗುವುದಿಲ್ಲ. ಅದರಲ್ಲಿ ಎಕ್ಸೈಸ್ ಡಿಪಾರ್ಟ್‌ಮೆಂಟಿನಲ್ಲಿ ಅಡ್ಜೆಸ್ಟ್ ಆಗುತ್ತಾರೆ, ಕೆಮಿಕಲ ಯೂನಿಟಗಳವರನ್ನೂ ನೋಡಿ ಕೊಳ್ಳುತ್ತಾರೆ ಮತ್ತು ಸೆಕೆಂಡ್ಸ್ ಅನ್ನು ಮಾರಾಟ ಮಾಡಲು ಏನೇನು ವ್ಯವಸ್ಥೆ ಮಾಡಬೇಕೋ ಅವೆಲ್ಲವನ್ನು ಕೂಡ ಇವೊತ್ತು ಮಾಡುತ್ತಾರೆ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, 1992-93ರಲ್ಲಿ ಇದರಿಂದ 510 ಕೋಟಿ ರೂಪಾಯಿಗಳಷ್ಟು ಆದಾಯ ಇದ್ದರೆ, 93-94ರಲ್ಲಿ 639 ಕೋಟಿ ರೂಪಾಯಿಗಳು, 94-95ರಲ್ಲಿ 713 ಕೋಟಿ ರೂಪಾಯಿ, 95-96ರಲ್ಲಿ 850 ಕೋಟಿ ರೂಪಾಯಿಗಳು. 1996-97ನೇ ಸಾಲಿನಲ್ಲಿ ಜನವರಿ ಅಂತ್ಯದವರೆಗೆ 600 ಕೋಟಿ ರೂಪಾಯಿಗಳವರೆಗಿದೆ. ಅಂದರೆ, ಇನ್ನೂ ಕಾದು ನೋಡೋಣ, ಇನ್ನೆರಡು ತಿಂಗಳುಗಳಲ್ಲಿ 800 ಕೋಟಿ ರೂಪಾಯಿಗಳು ಬರುತ್ತದೆಂದು ತಿಳಿದುಕೊಳ್ಳೋಣ. ಆದರೆ, ಇದಕ್ಕಿಂತ ಹೆಚ್ಚು ಆದಾಯ ಬರತಕ್ಕಂಥ ಲಕ್ಷಣವಿದ್ದಾಗ ನೀವು ಯಾರಿಗೋಸ್ಕರ ಈ ತಿದ್ದುಪಡಿ ತಂದಿರಿ? ಖೋಡೆ ಅವರಿಗೋಸ್ಕರವೇ? ಇಲ್ಲವೇ ಬೇರೆ ಡಿಸ್ಟಿಲರಿ ಓನರ್‌ಗೆ ಸಹಾಯ ಮಾಡಬೇಕೆಂದೇ? ಅಥವಾ ಚುನಾವಣೆಯಲ್ಲಿ ಅವರು ನಿಮಗೆ ಅನುಕೂಲ ಮಾಡಿಕೊಡುತ್ತಾರೆಂಬ ದೃಷ್ಟಿಯಿಂದ ತಂದಿದ್ದೀರಾ? ಏಕೆಂದರೆ, ರಾಜ್ಯದ ಹಿತ ದೃಷ್ಟಿಯಿಂದ ತಂದಿದ್ದರೆ ಲಾಭಕರವಾಗಿರುವಂಥ ಕಾನೂನನ್ನು ಬದಲಾವಣೆ ಮಾಡತಕ್ಕಂಥ ಅಗತ್ಯವಿರಲಿಲ್ಲ. 30ನೇ ಸೆಪ್ಟೆಂಬರ್, 1989ರ ರೂಲ್ಸ್ ಏನಿದೆ, ಆ ರೂಲ್ಸ್‌ಗೆ ತಿದ್ದುಪಡಿ ತಂದಿದ್ದಕ್ಕೆ ಹೈಕೋರ್ಟ್ ಅಪಹೆಲ್ಡ್ ಮಾಡಿದೆ. ತಾವೇ ವಾದ ಮಾಡಿದ್ದೀರಿ, ಏನೆಂದರೆ, ನಮ್ಮ ರಾಜ್ಯದ ಬೊಕ್ಕಸಕ್ಕೆ ತೊಂದರೆಯಾಗುತ್ತಿದೆಯೆಂದು ನಾವು ಹೆಚ್ಚು ಹಣವನ್ನು ಸಂಪಾದಿಸಬೇಕು, ಹೆಚ್ಚು ಎಕ್ಸೈಸ್ ಡ್ಯೂಟಿಯನ್ನು ಕಲೆಕ್ಟ ಮಾಡಬೇಕೆನ್ನುವ ದೃಷ್ಟಿಯಿಂದ ಇವೊತ್ತು ಕಾನೂನು ತಂದಿದ್ದು ಸರಿಯಿದೆಯೆಂದು ನೀವೇ ಹೈಕೋರ್ಟಿನಲ್ಲಿ ಮತ್ತು ಸುಪ್ರೀಂಕೋರ್ಟಿನಲ್ಲಿ ವಾದ ಮಾಡಿದಿರಿ. ಈ ರೀತಿ ವಾತ ಮಾಡಿದ ನಂತರ ನಿಮಗೆ ಅನುಕೂಲವಾಗುವಂತೆ ಇವೊತ್ತಿನ ದಿವಸ ಸುಪ್ರೀಂಕೋರ್ಟ್ ಆದೇಶ ಕೊಟ್ಟಿತು. ಸದರಿ ಆದೇಶವಿತ್ತು ಒಂದು ವರ್ಷವಾಯಿತು. ಮಾನ್ಯ ಸಚಿವರಾದ ತಿಪ್ಪೇಸ್ವಾಮಿಯವರು ಅಬ್ಕಾರಿ ಖಾತೆ ವಹಿಸಿಕೊಂಡಿದ್ದಾಗ, ಈ ಆದೇಶ ಬಂತೆಂದು ಹೆಚ್ಚು-ಕಡಿಮೆ ಅನಿಸುತ್ತದೆ. 19ನೇ ಡಿಸೆಂಬರ್, 95ರಲ್ಲಿ ಆದೇಶ ಕೊಟ್ಟರೂ ಇಂದಿಗೆ ಒಂದು ವರ್ಷ ಮೂರು ತಿಂಗಳುಗಳಾಗುತ್ತಿದ್ದರೂ ಸಹ ಯಾವುದರಲ್ಲಿ ನೀವು ಆದಾಯವನ್ನು ಹೆಚ್ಚಿಸಬಹುದೆಂದು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ನಂತರ ಅದನ್ನು ನೀವು ಒಪ್ಪದೇ, ನಿಮ್ಮದೇ ಆದ ರೀತಿಯಲ್ಲಿ ಇವೊತ್ತು ಕಾನೂನಿಗೆ ತಿದ್ದುಪಡಿ ತರುತ್ತಿದ್ದೀರಲ್ಲ, ಇದು ಯಾರ ಅನುಕೂಲಕ್ಕೋಸ್ಕರ? ರಾಜ್ಯದ ಅನುಕೂಲಕ್ಕೋಸ್ಕರವೇ? ಇಲ್ಲವೇ ಆದಾಯವನ್ನು ಹೆಚ್ಚು ಮಾಡಬೇಕೆಂಬುದಕ್ಕೋಸ್ಕರವೇ? ನೀವೇನು ಮಾಡಿದ್ದೀರೆಂದರೆ, ಪ್ರೈವೇಟ್ ಡಿಸ್ಟಿಲರಿ ಓನರ್‌ಗೂ ಕೂಡ ಸಹಾಯ ಮಾಡಬೇಕು, ಅವರನ್ನು ಸೋಲ್ ಏಜೆಂಟ್ ಮಾಡಿ. ತಮಗೆ ಅನುಕೂಲ ಮಾಡಿಕೊಡುತ್ತೇವೆಂಬ ಉದ್ದೇಶ ನಿಮ್ಮದಾಗಿದ್ದರೆ ನೀವು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್

ಮುಂದೆ ಈ ವಾದವನ್ನು ಮಂಡಿಸುವ ಅವಶ್ಯಕತೆಯಿರಲಿಲ್ಲ. ಅಥವಾ 1989ರಲ್ಲಿ ನಾವು ಏನು ಕಾನೂನು ಮಾಡಿದ್ದವು, ಆ ಕಾನೂನು ಸರಿಯಿಲ್ಲವೆಂದು ನೀವು ಕೈಬಿಡಬಹುದಾಗಿತ್ತು. ಆದರೆ, ಅದನ್ನು ಕೈಬಿಡದೆ ಅದಕ್ಕೂ ಕೂಡ ಕೊನೆವರೆಗೂ ಫೈಟ್ ಮಾಡಿ ತಲುಪಿಸಿ ನಿಮ್ಮ ಪರವಾಗಿ ಜಡ್ಜ್‌ಮೆಂಟ್ ಬಂದ ನಂತರ ಪುನಃ ಡಿಸ್ಟಿಲರಿ ಓನರ ಪರವಾಗಿ ನೀವು ಇವೊತ್ತಿನ ದಿವಸ ಹೋಗುತ್ತಿದ್ದೀರಿ ಎಂದರೆ ನೀವು ಎಕ್ಸೆಸ್ ಲಾಬಿ ಜೊತೆಯಲ್ಲಿ ಹೊಂದಿಕೊಂಡಿದ್ದೀರಿ, ಅವರ ಲಾಬಿಗೆ ಒಳಗಾಗಿದ್ದೀರಿ, ಡಿಸ್ಟಿಲರಿ ಓನರ್ ನಿಮ್ಮ ಮೇಲೆ ಇವೊತ್ತಿನ ದಿವಸ ಏನು ಪ್ರಭಾವ ಬೀರುತ್ತಿದ್ದಾರೆ, ಆ ಪ್ರಭಾವಕ್ಕೊಳಗಾಗಿ ಈ ತಿದ್ದುಪಡಿ ತಂದಿದ್ದೀರಿ, ಇಲ್ಲದಿದ್ದರೆ, ತಿದ್ದುಪಡಿ ತರತಕ್ಕಂಥ ಅವಶ್ಯಕತೆಯಿರಲಿಲ್ಲ, ಕಾರಣವೂ ಇರಲಿಲ್ಲ ಅಲ್ಲವೆ, ರೂಲ್ಸ್ ಅನ್ನು ಸಹ ಪಬ್ಲಿಶ್ ಮಾಡತಕ್ಕಂಥ ಯಾವುದೇ ಅವಶ್ಯಕತೆಯಿರಲಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದನ್ನು ಕೂಡ ದಿನಾಂಕ 30.12.96ರಂದು ತರಾತುರಿಯಲ್ಲಿ ತಂದು ಏಕ ಮಾರ್ಪಾಡು ಮಾಡಿದಿರಿ? ಆಗ ಅಸೆಂಬ್ಲಿ ಸೇರುವುದಿತ್ತು. ಆ ಅಮೆಂಡಮೆಂಟನ್ನು ಸಬಾರ್ಡಿನೇಟ್ ಲೆಜಿಸ್ಲೇಶನ್ ಕಮಿಟಿಗೆ ಕಳುಹಿಸಿದರು. ಇಷ್ಟೊಂದು ಆದಾಯ ಬರತಕ್ಕಂಥಾದ್ದನ್ನು ಪ್ರೈವೇಟ್‌ನವರಿಗೆ ಕೊಟ್ಟಿರಿ. ನಮಗೆ ಹೆಚ್ಚು ಆದಾಯ ಬರುತ್ತದೆಂದು ನೀವೇನಾದರೂ ಈ ಸದನದಲ್ಲಿ ಆ ಕುರಿತ ಪ್ರಸ್ತಾಪ ತಂದು ಹೇಳಿದ್ದೀರೋ? ಏನೂ ಇಲ್ಲ. ಇದರಿಂದ ಯಾರ್‍ಯಾರಿಗೆ ಏನೇನು ಬೋನಸ್ ಕೊಡಬೇಕೋ ಕೊಡುತ್ತಿಲ್ಲ. ಒಂದು ಕಡೆ ರಿಸೋರ್ಸ್ ಮೊಬಿಲೈಸ್ ಆಗಿಲ್ಲ, ಅದಕ್ಕೊಸ್ಕರ ಇವೊತ್ತು ನಾವು ಪ್ಲಾನ ಟೌಟಲೇ ಅನ್ನು ಕಟ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಕೆಎಸ್‌ಆರ್‌ಟಿಸಿ ಲುಕ್ಸಾನು, ಕೆಪಿಸಿ ಲುಕ್ಸಾನು, ಕೆಇಬಿ ಲುಕ್ಸಾನು, ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಎಲ್ಲವೂ ಲುಕ್ಸಾನು ಆಗಿರುವುದರಿಂದ, ನಾವು 500-600 ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸುವುದಕ್ಕಾಗಲಿಲ್ಲವೆಂದು ಹೇಳುತ್ತೀರಿ. ಅಪೇಕ್ಷೆ ಪ್ರಕಾರ ಸರ್ಕಾರಕ್ಕೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಿಂದ ಬರತಕ್ಕಂಥ ಲಾಭವಾಗಲೀ ಅಥವಾ ಲೋನ್ ಏನು ಬರಬೇಕಾಗಿತ್ತು ಅದು ಬಂದಿಲ್ಲ. ಇವತ್ತು ನೀರಾವರಿಯಲ್ಲಿ 173 ಕೋಟಿ, ವಿದ್ಯುತ್‌ಗಾಗಿ 130, ರೂರಲ್ ಡೆವಲಪ್‌ಮೆಂಟ್‌ಗಾಗಿ 70 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ವಿವಿಧ ಇಲಾಖೆಗಳಲ್ಲಿ ಕಡಿತ ಮಾಡಿ, ಎಲ್ಲಾ ಕಲ್ಯಾಣದ ಕೆಲಸಗಳು, ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿದ್ದೀರಿ. ಒಂದು ಕಡೆ ಹಣವಿಲ್ಲವೆಂದು ಹೇಳುತ್ತೀರಿ ಮತ್ತೊಂದು ಕಡೆ ಹಣವೆಲ್ಲಿ ಸಿಗುತ್ತದೆ, ಹಣ ಸಿಗುವ ಅನುಕೂಲತೆ ಎಲ್ಲಿದೆ ಅಲ್ಲಿ ಹಣವನ್ನು ಸೋರಿ ಹೋಗತಕ್ಕ ಕೆಲಸವನ್ನು ಮಾಡುತ್ತಿದ್ದೀರೆಂದರೆ ನಾವು ಏನು ಹೇಳಬೇಕು? ಯಾವ ಭಾಷೆಯಲ್ಲಿ ತಮಗೆ ಹೇಳಬೇಕು? ತಾವು ಅವರ ಮುಲಾಜಿಗೆ ಒಳಗಾಗಿ ಅಥವಾ ಅವರಿಂದ ಸಹಾಯವನ್ನು ಪಡೆದುಕೊಳ್ಳುವುದಕ್ಕಾಗಿ ಇದನ್ನು ಮಾಡಿದ್ದೀರೆಂದು ಹೇಳ ಬೇಕೇ? ನಿಮಗೆ ಯಾವ ಭಾಷೆಯಲ್ಲಿ ಹೇಳಿದರೆ ಅರ್ಥವಾಗುತ್ತದೆ? ಒಂದು ಕಡೆ ತಮಗೆ ಇಚ್ಛೆ ಬಂದಂತೆ ಅದು ಯಾವುದೇ ಯೋಜನೆಯಾಗಿರಲಿ ಹಣವನ್ನು ಹಂಚುತ್ತಿದ್ದೀರಿ. ಮತ್ತೊಂದು ಕಡೆ ಕ್ಲೇಮ್ಸನ್ನು ಸೆಟ್ಲು ಮಾಡುತ್ತಿದ್ದೀರಿ. ಮಾನ್ಯ ನಾಗೇಗೌಡರು ನಾವು ನೀರಾವರಿಗಾಗಿ 930 ಕೋಟಿ ಖರ್ಚು ಮಾಡುತ್ತಿದ್ದೇವೆಂದು ಪದೇ ಪದೇ ಹೇಳುತ್ತಿರುತ್ತಾರೆ. ಆದರೆ ಫಿಜಿಕಲ್ ಅಚೀವ್‌ಮೆಂಟ್ ಏನಿರುತ್ತದೆ ಅದನ್ನು ಹೇಳಬೇಕಾಗುತ್ತದೆ. ಇವತ್ತು ಎಲ್ಲಾ ಇಲಾಖೆಯ ಫಿಜಿಕಲ್ ಅಚೀವ್‌ಮೆಂಟನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ತಾವು ಖರ್ಚು ಮಾಡಿದಂಥ ಹಣ ಒಂದು ಕಡೆ ಪೋಲಾಗುತ್ತಿದೆ, ಮತ್ತೊಂದು

ಕಡೆ ಬರತಕ್ಕಂಥ ಹಣವನ್ನು ಸಂಗ್ರಹಣೆ ಮಾಡುವ ಶಕ್ತಿ ಇಲ್ಲವೆಂದರೆ ಈ ಸರ್ಕಾರಕ್ಕೆ ಅಭಿವೃದ್ಧಿ ಕೆಲಸದ ಬಗ್ಗೆ ಆಸಕ್ತಿ ಇಲ್ಲ, ರಿಸೋರ್ಸನ್ನು ಮೊಬಿಲೈಜೇಷನ್ ಮಾಡುವ ಬಗ್ಗೆ ಆಸಕ್ತಿ ಇಲ್ಲ, ರಿಸೋರ್ಸ್ ಮೊಬಿಲೈಜೇಷನ್ ಮಾಡಿ ನಮ್ಮ ಪ್ಲಾನ್‌ನ್ನು ಹಿಡಿತದಲ್ಲಿ ಇಟ್ಟುಕೊಂಡು ಆಚರಣೆಯಲ್ಲಿ ತರಬೇಕು ಎನ್ನತಕ್ಕ ಹಠ, ಚಲ ಇಲ್ಲ, ಏನೋ ಮಜಾ ಮಾಡಿಕೊಂಡು ಇದ್ದಷ್ಟು ದಿವಸ ಇದ್ದು ಹೋಗಬೇಕು ಎನ್ನತಕ್ಕ ಅಭಿಪ್ರಾಯ ತಮಗೆ ಇರುವುದನ್ನು ಬಿಟ್ಟರೆ, ಬೇರೆ ವಿಚಾರ ತಮ್ಮಲ್ಲಿ ಇಲ್ಲ ಎಂಬುದು ತಾವು ತಂದಿರುವ ಈ ಕಾನೂನಿನ ತಿದ್ದುಪಡಿಯಿಂದ ಸ್ಪಷ್ಟವಾಗುತ್ತದೆ ಎನ್ನತಕ್ಕದನ್ನು ತಮ್ಮ ಗಮನಕ್ಕೆ ತರುತ್ತೇನೆ. ಡ್ರಾಫ್ಟ್ ನೋಟಿಫಿಕೇಷನ್ ನಂಬರ್‌ರನ್ನೇನು ಬದಲಾವಣೆ ಮಾಡಬೇಕೆಂದು ಕೊಟ್ಟಿದ್ದಾರೆ, ಅದರ ಬಗ್ಗೆ ಹೇಳುತ್ತೇನೆ. ಬೇಕಾದರೆ ಮಾನ್ಯ ನಾಣಯ್ಯನವರು ಅದನ್ನು ತರಿಸಿಕೊಳ್ಳಬಹುದು. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಅವರದ್ದೇ ಕಂಪನಿ, ಅವರ ಕಂಪನಿಯವರೇ ಇದು ಅನ್ಯಾಯವಾಗುತ್ತದೆ, ಇದರ ನಿಯಮ ಸರಿಯಾಗಿಲ್ಲ, ನಮಗೆ ಇದರಿಂದ ತೊಂದರೆಯಾಗುತ್ತದೆ, ರಾಜ್ಯಕ್ಕೆ ಎಕ್ಸೈಜಿನಿಂದ ಬರಬೇಕಾದ ಹಣವು ಬರುವುದಿಲ್ಲ ಎಂದು ಹೇಳಿ ಅಬ್ಜೆಕ್ಷನ್ ಹಾಕಿದರೂ, ಅದನ್ನು ಇವರು ಗಣನೆಗೆ ತೆಗೆದುಕೊಳ್ಳಲಿಲ್ಲ. ನಮಗೆ ಏನು ಬೇಕೋ ಅದನ್ನು ಮಾಡಿದ್ದೇವೆ, ನಿಮಗೆ ಏನು ಹೇಳಬೇಕೋ ಅದನ್ನು ಹೇಳಿ ಎನ್ನತಕ್ಕ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಇದರಿಂದಾಗಿ ಇವರು ಒಳ್ಳೆಯ ವಿಚಾರಗಳನ್ನು ಎಷ್ಟರಮಟ್ಟಿಗೆ ಕಡೆಗಣಿಸಿ, ಬರತಕ್ಕಂಥ ಹಣವನ್ನು ಪೋಲ್ ಮಾಡುತ್ತಿದ್ದಾರೆ ಎನ್ನತಕ್ಕದ್ದನ್ನು ಇದರಿಂದ ಸ್ಪಷ್ಟವಾಗುತ್ತದೆ. ಎಂ.ಎಸ್.ಐ.ಎಲ್.ನವರು ಅಬ್ಜೆಕ್ಷನ್ ಫೈಲ್ ಮಾಡಿ ನಾವು ಹೆಚ್ಚಿನ ಹಣವನ್ನು ಸಂಪಾದನೆ ಮಾಡಿ ಕೊಡುತ್ತೇವೆ, ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಆದಾಯವನ್ನು ಮಾಡಿ ಕೊಡುತ್ತೇವೆ ಎನ್ನತಕ್ಕ ಮಾತನ್ನು ಅಫಿಡೆವಿಟ್ ಮೂಲಕ ತಮಗೆ ಹೇಳುವಾಗಲೂ, ಅಬ್ಜೆಕ್ಷನ್ ಫೈಲ್ ಮಾಡಿದರೂ ತಾವು ನಮ್ಮ ಅಂದಾಜಿನ ಪ್ರಕಾರ 400 ರಿಂದ 500 ಕೋಟಿ ಬರತಕ್ಕ ಹಣವನ್ನು ಲೀಕೇಜ್ ಮಾಡಿದರೆ, ತಮಗೂ ಎಕ್ಸೈಜ್ ಓನರ್ಸ್‌ಗೂ ಸಂಬಂಧ ವಿದೆ, ಅವರ ಲಾಭಿಗೆ ಮಣಿದಿದ್ದೀರಿ, ಅವರಿಗೆ ಬೇಕಾದಂಥ ಕಾನೂನನ್ನು ತಂದುಕೊಡುತ್ತಿದ್ದೀರಿ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಈ ನಿಯಮವನ್ನು ತಿದ್ದುಪಡಿ ಮಾಡಿ, ತಮ್ಮ ಮನಸ್ಸಿಗೆ ಬಂದಂತೆ ಮಾಡಲು ಹೊರಟಿದ್ದೀರಿ, ಇದರಿಂದ ರಾಜ್ಯದ ಬೊಕ್ಕಸಕೆ ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳ ಬೇಕಾಗಿರುತ್ತದೆ. ದೇಶದ ಜನರು ಇದನ್ನು ನೋಡುತ್ತಿದ್ದಾರೆ. ಇದರ ಬಗ್ಗೆ ವಿವರಣೆ ಕೊಡಲು ತಮಗೆ ಯಾವುದೇ ಆಧಾರವಿಲ್ಲ. ಆಶ್ರಯ ಮನೆಗಳನ್ನೂ ಇನಡಿಸ್ಟ್ರಿಮಿನೇಟರಿ ಕೊಟ್ಟಾಗ, ನಮಗೆ ಅಧಿಕಾರವಿದೆ, ನಮ್ಮ ಡಿಸ್ಟ್ರಿಷನರಿ ಪವರನ್ನು ಹೇಗೆ ಬೇಕೋ ಹಾಗೆ ಉಪಯೋಗ ಮಾಡುತ್ತೇವೆಂದು ಹೇಳಿ ಕೊಂಡಿರಿ. ಆದರೆ ತಾವು ಯಾರೋ ಒಬ್ಬಿಬ್ಬರು ಡಿಸ್ಟಿಲರಿ ಓನರ್‌ಗಳಿಗೆ ಸಪೋರ್ಟ್ ಮಾಡುವುದಿದ್ದರೆ, ಅವರಿಗೆ ಸೋಲ್ ಏಜೆಂಟ್ ಆಗಿ ಸಹಾಯ ಮಾಡುವುದಿದ್ದರೆ, ಇದಕ್ಕಿಂತ ದೊಡ್ಡ ಬಿಟೆಯಲ್ ಕರ್ನಾಟಕ ರಾಜ್ಯಕೆ ಮತ್ತಾವುದೂ ಇಲ್ಲವೆಂದು ಹೇಳಬೇಕಾಗುತ್ತದೆ. ಇಲ್ಲಿ ಒಂದೆರೆಡು ಕೋಟಿಯ ಪ್ರಶ್ನೆಯಲ್ಲ, ನೂರಾರು ಕೋಟಿ ಪ್ರಶ್ನೆ ಇದೆ. ಹತ್ತು, ಐದು ಲಕ್ಷ ಗ್ರಾಂಟನ್ನು ಯಾರಿಗೋ ಫೇವರ್ ಮಾಡುವುದಕೆ ಕೊಟ್ಟಿದ್ದರೆ, ನಾವು ಏನಾದರ ತಿಳಿದುಕೊಳ್ಳಬಹುದಾಗಿತ್ತು. ಆದರೆ ತಾವು 400-500 ಕೋಟಿ ರೂಪಾಯಿಗಳು ಲೀಕೇಜ್ ಆಗುವ ರೀತಿಯಲ್ಲಿ, ಕಾನೂನುಗಳನ್ನು

ಡಿಸ್ಪಿಲರಿ ಓನರ್‌ಗಳಿಗೆ ಸಹಾಯ ಮಾಡತಕ್ಕ ರೀತಿಯಲ್ಲಿ ತಿದ್ದುಪಡಿ ಮಾಡಿಕೊಟ್ಟರೆ, ನಿಜವಾಗಿಯೂ ಇದರ ಬಗ್ಗೆ ತಮಗೆ ಆಸಕ್ತಿ ಇಲ್ಲವನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ. ಇಂದು ಮಾನ್ಯ ಬೈರೇಗೌಡರು ಇಲ್ಲಿ ಬಂದಿಲ್ಲ. ಹೆಗಡೆಯವರ ಕಾಲದಲ್ಲಿ ಬೈರೇಗೌಡರು ಮತ್ತು ವರದೇ ಗೌಡರು ಸೆಕೆಂಡ್ಸ್ ಇಷ್ಟೂಂದು ಹೋಗುತ್ತಿದೆ, ಇದನ್ನು ಕಂಟ್ರೋಲ್ ಮಾಡಲು ಸಾಧ್ಯವಾಗಿಲ್ಲ, ಹೆಗಡೆಯವರು ಎಕ್ಸೈಜ್ ಲಾಬಿಗೆ ಮಣಿದಿದ್ದಾರೆ ಎಂದು ಅಂಕಿಅಂಶಗಳನ್ನು ಕೊಟ್ಟು ಇದೇ ಸದನದಲ್ಲಿ ಹೇಳಿದ್ದರು. ಆದರೆ ಸೆಕೆಂಡ್ಸನ್ನು ಕಂಟ್ರೋಲ ಮಾಡತಕ್ಕ ಕಾನೂನನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಮೇಲೆ, ಹೈಕೋರ್ಟ್ ಅದನ್ನು ಎತ್ತಿಹಿಡಿದಮೇಲೆ, ಸುಪ್ರೀಂ ಕೋರ್ಟ್ ಅದನ್ನು ಎತ್ತಿಹಿಡಿದಮೇಲೆ ಸಹ ಬೈರೇಗೌಡರು ಇಂದು ಏಕೆ ಸುಮ್ಮನೆ ಕುಳಿತುಕೊಂಡಿದ್ದಾರೆ ಎಂದು ಕೇಳಬಯಸುತ್ತೇನೆ. ಅಂದು ನಾಲ್ಕುನೂರು, ಐದುನೂರು ಕೋಟಿ ರೂಪಾಯಿಗಳು ಸೋರಿಹೋಗುತ್ತಿದೆಯೆಂದು ಹೇಳಿ, ಪತ್ರಿಕೆಗಳ ಮೂಲಕ ದೊಡ್ಡ ದೊಡ್ಡ ಸ್ಟೇಟ್‌ಮೆಂಟ್‌ಗಳನ್ನು ಅವರುಗಳು ಕೊಟ್ಟರು. ಅವರುಗಳು ಅಂದು ಮಾಡಿರುವ ಭಾಷಣದ ಪ್ರತಿಯನ್ನು ತಂದಿದ್ದೇನೆ. ಆದರೆ ಇವತ್ತು ಅವರೇ ಮಂತ್ರಿಮಂಡಲದಲ್ಲಿದ್ದಾರೆ. ಆದರೆ ಈ ಕಾನೂನಿಗೆ ತಿದ್ದುಪಡಿ ಮಾಡುವ ಬಗ್ಗೆ ಕ್ಯಾಬಿನೇಟ್‌ಗೆ ಬಂದಾಗ, ತಾವೇಕೆ ಸುಮ್ಮನಿದ್ದಿರಿ? ತಾವೇಕೆ ಅದಕ್ಕೆ ವಿರೋಧ ಮಾಡಲಿಲ್ಲ? ನಾವು ಸೆಕೆಂಡ್ಸನ್ನು ನಿಲ್ಲಿಸುವ ಬಗ್ಗೆ ಕಾನೂನನ್ನು ಮಾಡಿದಾಗ ನೀವೆ ಇದರಿಂದ ಅನುಕೂಲವಾಗುತ್ತದೆ ಎಂದು ಸ್ವಾಗತ ಮಾಡಿದ್ದೀರಿ, ಆ ರೀತಿ ಸ್ವಾಗತವನ್ನು ಮಾಡಿದ್ದ ತಾವೇ ಇಂದು ಆ ಕಾನೂನನ್ನು ತೆಗೆದು ಹಾಕಿ ಡಿಸ್ಪಲರಿಯವರೆಗೆ ಸಹಾಯ ಮಾಡತಕ್ಕ ಕಾನೂನನ್ನು ತಿದ್ದುಪಡಿ ಮಾಡಲು ಸಪೋರ್ಟ್ ಮಾಡಿದರೆ, ಇವರ ವರ್ತನೆಗೆ ನಾವೇನು ಹೇಳಬೇಕು? ನಿಮಗೆ ಬರತಕ್ಕಂಥ ಹಣವನ್ನು ಇಟ್ಟುಕೊಳ್ಳಲು ಏನಾದರೂ ಬೇಕಲ್ಲವೆ? ಅಂದು ಬೈರೇಗೌಡರು ಕರ್ನಾಟಕ ರಾಜ್ಯದಲ್ಲಿ ಸೆಕೆಂಡ್ಸ್‌ನ ಹಾವಳಿ ಜಾಸ್ತಿಯಾಗಿದೆ, ಇದಕ್ಕೆ ಸರ್ಕಾರ ಕುಮ್ಮಕ್ಕು ಕೊಡುತ್ತಿದೆಯೆಂದು ಹೆಗಡೆಯವರು ಇದ್ದಾಗ ಹೇಳಿದ್ದರು. ಬಹುಶಃ ಅವರಷ್ಟು ಸಮರ್ಥವಾಗಿ ಆ ಕಾಲದಲ್ಲಿ ಇದರ ಬಗ್ಗೆ ಪ್ರತಿಪಾದನೆಯನ್ನು ಮತ್ತಾರು ಮಾಡಿರಲಿಲ್ಲ. 13ನೇ ಸೆಪ್ಟಂಬರ್ 1989ರಲ್ಲಿ ಮಾನ್ಯ ರಾಜಶೇಖರ ಮೂರ್ತಿಯವರೇನು ಎಕ್ಸೈಜ್ ಆಕ್ಟ್‌ಗೆ ತಿದ್ದುಪಡಿ ತಂದು ಸೆಂಕೆಂಡ್ಸ್ ಹಾವಳಿಯನ್ನು ನಿಲ್ಲಿಸಬೇಕೆಂದು ಪ್ರಾಮಾಣಿಕವಾದ ಪ್ರಯತ್ನವನ್ನು ನಮ್ಮ ಸರ್ಕಾರದವರು ಮಾಡಿದ್ದರು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಈ ಕಾನೂನನ್ನು ತಂದರು.

11.40 ಎ.ಎಂ

ಈ ಕಾನೂನನ್ನು ಜಾರಿಗೆ ತಂದ ಮೇಲೆ ಏನಾಯಿತು? ನಿಮಗೆ ಗೊತ್ತಿದ್ದಂತೆ, ಕೆಲವು ಡಿಸ್ಪಿಲರಿ ಓನರಗಳು, ನೀವು ಯಾರಿಗೆ ಈ ಕಡೆ ಕುಳಿತು ಆಪಾದನೆ ಮಾಡಿದ್ದೀರಿ, ಅವರೇ ಹೋಗಿ ಸ್ಟೇ ಆರ್ಡರ್ ತಂದ ಮೇಲೆ ಅದು ಮುಂದೆ ಹಾಗೇ ನಡೆಯಿತು. ಅರ್ಧ ಎಂ.ಎಸ್.ಐ.ಎಲ್. ಕೆಲವು ಜನ ಪ್ರೈವೇಟ್ ಡಿಸ್ಪಿಲರಿ ಓನರ್ಸ್ ಪ್ರೈವೇಟ್ ಸೋಲ್ ಏಜೆಂಟ್ಸ್ ಅಂತ ಹೇಳಿ ಪ್ರೈವೇಟ್ ಪೀಪಲ್‌ಗೆ ಏನು ಕೊಟ್ಟಿದ್ದರು, ಅವರು ಇವರೂ ಸೇರಿಯೇ ನಡೆಸುತ್ತಿದ್ದರು. ಆದರೆ ಅದರ ವಿರುದ್ಧವಾಗಿ ಯಾವಾಗ ಹೈ-ಕೋರ್ಟ್ ಸ್ಟೇ ಆರ್ಡರ್ ವೆಕೇಟ್ ಮಾಡಿತೋ ಆಗ ಡಿಸ್ಪಿಲರಿ ಓನರ್ಸ್ ಪುನಃ ಆ ಬಗ್ಗೆ ವಿವಾದವನ್ನು ಸುಪ್ರೀಂ ಕೋರ್ಟ್‌ಗೆ ಒಯ್ದರು. ಅವರು ಸುಪ್ರೀಂ ಕೋರ್ಟ್‌ಗೆ ಹೋದ ಮೇಲೆ, ನೀವೂ ಕೂಡ

ಸುಪ್ರೀಂ ಕೋರ್ಟಿನಲ್ಲಿ ವಾದ ಮಾಡಿ, ನಾವು ಮಾಡಿದಂತಹ ಕಾನೂನು ಸರಿ ಇದೆ ಎಂದು ಹೇಳಿದ ಮೇಲೆ, ಸುಪ್ರೀಂ ಕೋರ್ಟ್‌ನವರು ನಿಮ್ಮ ಮಹತ್ವವನ್ನು ಎತ್ತಿ ಹಿಡಿದರು. ಸುಪ್ರೀಂ ಕೋರ್ಟ್‌ನವರು ಏನು ಹೇಳಿದರು ಎಂದರೆ, ರಾಜ್ಯ ಸರ್ಕಾರದವರು ಕಾನೂನು ಮಾಡತಕ್ಕಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ, ಆದ್ದರಿಂದ ಒಂದು ಕಾನೂನಿನಿಂದ ಅವರಿಗೆ ಹೆಚ್ಚಿನ ಆದಾಯ ಬರುತ್ತಿದೆ ಎಂದರೆ ಅದು ಖಂಡಿತವಾಗಿ ಎಂ.ಎಸ್.ಐ.ಎಲ್.ಗೆ ಕೊಡತಕ್ಕದ್ದು ಸೂಕ್ತ ಎನ್ನತಕ್ಕಂಥದ್ದು ಅಥವಾ ಸೋಲ ಏಜೆಂಟ್ಸ್ ಡಿಸ್ಟ್ರಿಬ್ಯೂಟಮಾಡುವುದಕ್ಕೆ ಎಂ.ಎಸ್.ಐ.ಎಲ್.ಗೆ ನೀಡಿದ್ದು ಸರ್ಕಾರಕ್ಕೆ ಬಿಟ್ಟ ವಿಷಯ ಎಂಬ ಮಾತನ್ನು ಹೇಳಿ ನಿಮ್ಮ ಮಾತಿಗೆ ಬೆಲೆ ಕೊಟ್ಟು ಜಡ್ಜ್‌ಮೆಂಟ್ ನಿಮ್ಮ ಪರವಾಗಿ ಆಯಿತು. ನಿಮ್ಮ ಪರವಾಗಿ ಜಡ್ಜ್‌ಮೆಂಟು 1995ರಲ್ಲಿ ಆದಮೇಲೆ 1996ರಲ್ಲಿ ಮೊನ್ನೆ 30ನೇ ತಾರೀಖು ಫೈನಲ್ ರೂಲ್ಸ್ ಅಮೆಂಡ್‌ಮೆಂಟ್ ಮಾಡಿ ಇವತ್ತು ಪುನಃ ಪ್ರೈವೇಟ್‌ನವರಿಗೆ ಕೊಡಬೇಕು ಎನ್ನುವುದು ನಿಮಗೆ ಗೊತ್ತಿತ್ತು. ನೀವ್ಯಾಕೆ ಇದನ್ನು ಖಂಡಿಸಲಿಲ್ಲ? ಇದರಿಂದ ಹೆಚ್ಚಿನ ಆದಾಯ ಬರುತ್ತದೆ ಎನ್ನತಕ್ಕಂಥ ಅರಿವು ಇದ್ದರೂ ಕೂಡಾ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಇದಕ್ಕೆ ಮಾನ್ಯತೆ ಏಕೆ ಕೊಟ್ಟರು? ಮಾನ್ಯ ಕಾನೂನು ಮಂತ್ರಿಗಳೂ ಕೂಡ ಏಕೆ ಈ ಸಲಹೆ ಕೊಟ್ಟರು? ಎಂದು ನಾನು ಕೇಳುತ್ತೇನೆ. ಅಧ್ಯಕ್ಷರೇ, ಈ ಬಡ ದೇಶದಲ್ಲಿ, ನಮಗೆ ಹಣ ಸಿಗುವುದೇ ಕಷ್ಟವಾಗಿದೆ, ಅಂತಹ ಕಡೆ ಸಿಕ್ಕಿದ ಹಣವನ್ನು ಈ ರೀತಿಯಾಗಿ ಮನಸ್ಸಿಗೆ ಬಂದಂತೆ ಕಾನೂನು ಮಾಡಿ ಪೋಲು ಮಾಡುವುದಾದರೆ ನಾವು ಏಕೆ ಅದನ್ನು ಕಲೆಕ್ಟ್ ಮಾಡಬೇಕು? ಆಟಲೀಸ್ಟ ಕಲೆಕ್ಟ ಮಾಡುವುದನ್ನು ಬಿಟ್ಟುಬಿಡಿ. ಇಲ್ಲವೇ ಟೋಟಲ್ ಪ್ರಾಹಿಬಿಷನ್ ತನ್ನಿ. ಇವತ್ತು ನೀವು ಕೆಲವೇ ಡಿಸ್ಟಿಲರಿ ಓನರ್ಸ್‌ಗಳಿಗೆ 400-500 ಕೋಟಿ ರೂ.ಗಳ ಲಾಭ ಮಾಡಿ ಕೊಟ್ಟು, ಅವರಿಂದ ಯಾವುದೋ ಒಂದು ಫೇವರ್ ಪಡೆದುಕೊಂಡು ಬಾಳಬೇಕಾದರೆ, ಕನಿಷ್ಟ ಪಕ್ಷ, ನಮ್ಮ ಡೆವಲಪ್‌ಮೆಂಟ್ ಶೇಕಡ 10-20ರಷ್ಟು ಕುಂಠಿತವಾದರೂ ಚಿಂತೆ ಇಲ್ಲ; ಆದರೆ 400-500 ಕೋಟಿ ರೂ.ಗಳು ಪ್ರೈವೇಟ್‌ನವರಿಗೆ ಹೋಗಿ ಬಡವರನ್ನೆಲ್ಲಾ ಸುಲಿಗೆ ಮಾಡಿ, ಎಕ್ಸ್‌ಪ್ಲಾಯ್ಟ್ ಮಾಡಿ ಇವತ್ತಿನ ದಿವಸ ಅವರ ಹಣವೇ ಹೋಗುತ್ತಿದೆ, ಅದಕ್ಕಾದರೂ ಆಟ್‌ಲೀಸ್ಟ್ ಕಡಿವಾಣ ಹಾಕಿದಂತಾಗುತ್ತದೆ. ಆ ಒಂದು ಕೀರ್ತಿಯಾದರೂ ನಿಮಗೆ ಬರುತ್ತದೆ. ಏನೋಪ್ಪ, ಇವತ್ತಿನ ದಿವಸ ಪ್ರಾಹಿಬಿಷನ್ ತಂದರು, ಅದಕ್ಕಾಗಿ ರಾಜ್ಯದ ಒಂದು ಖಜಾನೆಯಲ್ಲಿ ಹಣ ಇಲ್ಲ, ಅವರು ಒಳ್ಳೆಯ ಒಂದು ಕೆಲಸ ಮಾಡಿದಾಗ ಹಣದ ಕೊರತೆ ಇದೆ, ಅದಕ್ಕಾಗಿ ಇದರ ಬಗ್ಗೆ ನಾವು ಯಾರೂ ಮಾತನಾಡಬಾರದು ಎನ್ನತಕ್ಕಂಥ ಒಂದು ಪ್ರಶ್ನೆಯಾದರೂ ಬರುತ್ತದೆ. ಒಂದು ಕಡೆ ವಸೂಲಿ ಮಾಡುತ್ತೀರಿ, ಆದರೆ ವಸೂಲಿ ಮಾಡಿದ ಹಣ ಖಜಾನೆಗೆ ಬರದೇ ಯಾರೋ ಖಾಸಗಿ ವ್ಯಕ್ತಿಗಳಿಗೆ ಲಾಭ ಆಗತಕ್ಕಂತಹ ಅಥವಾ ಡಿಸ್ಟಿಲರಿ ಓನರ್ಸ್‌ಗೆ ಲಾಭ ಆಗತಕ್ಕಂತಹ ರೀತಿಯಲ್ಲಿ ಕಾನೂನು ಮಾಡಿದರೆ, ನಮ್ಮ ನಾಗರೀಕರಿಗೆ ಮತ್ತು ಪ್ರಜೆಗಳಿಗೆ ನೀವು ಅನುಕೂಲ ಮಾಡಿಕೊಟ್ಟಂತಲ್ಲ, ಈ ಕಡೆ ಶೋಷಣೆಯೂ ತಪ್ಪಿಲ್ಲ, ಅತ್ತ ಕಡೆ ಖಜಾನೆಗೂ ದುಡ್ಡು ಬರಲಿಲ್ಲ. ನೀವು ಯಾವ ಘನ ಉದ್ದೇಶದಿಂದ ನಾವು ಒಳ್ಳೆಯದು ಮಾಡುತ್ತೇವೆ ಎಂದು ಹೇಳುತ್ತೀರಿ, ಆ ಉದ್ದೇಶ ಏನೂ ಇದರಲ್ಲಿ ಇಲ್ಲ. ಹೀಗಾಗಿ ಇವತ್ತು ನೀವು ಎಕ್ಸ್‌ಪೋಸ್ ಆಗಿದ್ದೀರಿ, ಈ ಕಾನೂನಿನಲ್ಲಿ ಈ ಸರ್ಕಾರ ಬೆತ್ತಲೆ ಆಗಿದೆ. ಯಾವ ರೀತಿಯಾಗಿ ಇವತ್ತಿನ ದಿವಸ ಅವರು ನಡೆದುಕೊಳ್ಳುತ್ತಿದ್ದಾರೆ ಎನ್ನತಕ್ಕಂಥದ್ದನ್ನು ನಾವು ನೋಡಿದಾಗ, ಖಂಡಿತವಾಗಿ ಇದರಿಂದ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿ ಬರತಕ್ಕಂತಹ ಆದಾಯವನ್ನು

ತಪ್ಪಿಸತಕ್ಕ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ. ಈಗ ಪ್ರೈವೇಟ್ ಕೆಮಿಕಲ್ ಇಂಡಸ್ಟ್ರೀಸ್ ಏನಿವೆ, ಅವುಗಳದು ಕೂಡ ತಾವು ರಿವ್ಯೂ ಮಾಡಿಲ್ಲ. ನಾನು ಈ ಬಗ್ಗೆ ಒಂದು ಹೌಸ್ ಕಮಿಟಿ ಮಾಡಿ ಎಂದು ರಿಕ್ವೆಸ್ಟ್ ಮಾಡುತ್ತೇನೆ. ಇದಕ್ಕಾಗಿ ನಾನು ಒತ್ತಾಯಿಸುತ್ತೇನೆ. ಒಂದು ಹೌಸ್ ಕಮಿಟಿ ಏಕೆ ಬೇಕು ಅಂದರೆ ಈ ಸದನದ ಒಂದು ಜಂಟಿ ಸಮಿತಿಯನ್ನು ನೀವು ರಚನೆ ಮಾಡಿದರೆ, ಎಷ್ಟು ಇವತ್ತಿನ ದಿವಸ ಕೆಮಿಕಲ್ ಇಂಡಸ್ಟ್ರೀಸ್ ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ? ಒಂದೊಂದು ಇಂಡಸ್ಟ್ರೀಸಗಳಿಗೆ ಎಷ್ಟು ಕೋಟಾವನ್ನು ನೀವು ಸರ್ಕಾರದಿಂದ ಅಲಾಟ್ ಮಾಡುತ್ತೀರಿ? ಏನು ಪರ್ಮಿಟ್? ಅವರು ಮ್ಯಾನುಫಾಕ್ಚರ್ ಏನು ಮಾಡುತ್ತಾರೆ? ಅವರು ಸೇಲ್ಸ್ ಟ್ಯಾಕ್ಸ್ ಎಷ್ಟು ಕೊಡುತ್ತಾರೆ? ಅವರ ಪ್ರೊಡಕ್ಷನ್ ಎಷ್ಟು? ಮತ್ತು ಅದೇ ರೀತಿಯಾಗಿ ಎಷ್ಟು ಡಿಸ್ಪಲರೀಸಗಳಿವೆ? ನಮಗೆ 89 ಡಿಸ್ಪಿಲರೀಸ್‌ಗಳಿವೆ ಎಂದು ಮಾಹಿತಿ ಕೊಟ್ಟಿದ್ದಾರೆ. ಬ್ರೀವರೀಸ್ ಇಟ್ಟುಕೊಂಡು ಫೆನ್ನಿ ಪ್ರಾಡಕ್ಟ್ ಮಾಡತಕ್ಕಂಥದ್ದು ಮತ್ತು ಐ.ಎಂ.ಎಫ್.ಎಲ್. ಎಲ್ಲಾ ಸೇರಿ 89 ಎಂದು ಹೇಳಿದ್ದಾರೆ. ಅದರ ಕ್ವಾಂಟಿಟಿ ಏನು? ಮ್ಯಾನುಫಾಕ್ಚರ್ ಎಷ್ಟು ಮಾಡುತ್ತಾರೆ? ಅನ್ನತಕ್ಕಂಥದ್ದರ ಬಗ್ಗೆ ಜಂಟಿ ಸದನ ಸಮಿತಿ ಮಾಡಿ, ಆ ಜಂಟಿ ಸದನ ಸಮಿತಿ ಎಂ.ಎಸ್.ಐ.ಎಲ್. ನವರಿಗೆ ಸೋಲ್ ಏಜೆಂಟ ಮಾಡಿದರೆ ರಾಜ್ಯಕ್ಕೆ ಹಾನಿಯಾಗುತ್ತದೆ ಅಥವಾ ಬರತಕ್ಕಂತಹ ಆದಾಯ ಬರುವುದಿಲ್ಲ ಅನ್ನತಕ್ಕಂಥದ್ದು ಏನಾದರೂ ಈ ಸದನದ ಜಂಟಿ ಸಮಿತಿ ಶಿಫಾರಸ್ಸು ಮಾಡಿದರೆ, ಅದನ್ನು ನಾವು ಒಪ್ಪೋಣ. ಆದರೆ ನೀವು ನಿಮ್ಮ ಆದಾಯ ಹೆಚ್ಚಿನ ಕೊಳ್ಳತಕ್ಕಂತಹ ಸ್ಥಿತಿ ಇದ್ದಾಗ್ಯೂ ಕೂಡ ನೀವು ಇವತ್ತಿನ ದಿವಸ ಅದನ್ನು ಮಾಡುತ್ತಿಲ್ಲ ಎಂದರೆ, ನಿಮಗೆ ಈ ಕಡೆ ಮನಸ್ಸು ಇಲ್ಲ, ನಿಮ್ಮ ಜೀವ ಎಲ್ಲಾ ಕೂಡ ಆ ದುಡ್ಡಿನ ಕಡೆ, ಆ ಡಿಸ್ಪಿಲರೀಸ್ ಓನರ್ಸ್‌ಗಳ ಕಡೆಗೆ ಎಳೆಯುತ್ತಿದೆ ಎನ್ನತಕ್ಕಂಥ ಮಾತನ್ನು ನಾವು ಅನಿವಾರ್ಯವಾಗಿ ಹೇಳಬೇಕಾದಂತಹ ಪರಿಸ್ಥಿತಿ ಬಂದಿದೆ. ಅದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಕನಿಷ್ಟ ಪಕ್ಷ ಆತ್ಮಸಾಕ್ಷಿಯಾಗಿಯಾದರೂ ಅದನ್ನು, ನೀವು ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದಿದ್ದೇನೆ, ಉಳಿದ ವಿಚಾರಗಳಲ್ಲಿ ನೀವು ಏನೋ ವಾದ ವಿವಾದ ಮಾಡಬಹುದು, ಆದರೆ ಇದನ್ನು ನೀವು ಒಪ್ಪಿಕೊಳ್ಳುತ್ತೀರಿ ಎಂದು ನನಗೆ ಅರ್ಥವಾಗಿದೆ, ಅದಕ್ಕೆ ದಯವಿಟ್ಟು ತಾವು ಇದರ ಬಗ್ಗೆ ಒಂದು ಸದನ ಸಮಿತಿ ಮಾಡಬೇಕು, ಜಂಟಿ ಸದನ ಸಮಿತಿ ಮಾಡಿದರೆ ಎಲ್ಲಾ ವಿಷಯಗಳು...

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ನನಗೂ ಮಾತನಾಡಲು ಅವಕಾಶ ಕೊಡಿ ಎಂದು ನೀವು ಕೈ ಎತ್ತುತ್ತಿದ್ದೀರಿ. ಆದರೆ ನೀವು ಈ ನಿಲುವಳಿ ಸೂಚನೆ ಪ್ರಸ್ತಾಪ ಮಾಡಲು ಕಳುಹಿಸಿದ ನೋಟೀಸ್‌ಗೆ ಸೈನ್ ಮಾಡಿಲ್ಲವಲ್ಲ. ನೀವು ಸಿಗ್ನೇಟರಿ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಆದರೂ ನಿಲುವಳಿ ಸೂಚನೆ ಬೆಂಬಲಿಸಿ ಮಾತನಾಡಬಹುದು. ಸೈನ್ ಹಾಕದಿದ್ದರೂ ಅನೇಕ ಸಂದರ್ಭಗಳಲ್ಲಿ ಮಾತನಾಡಲು ಅವಕಾಶ ಕೊಟ್ಟ ಉದಾಹರಣೆಗಳಿವೆ. ಇದು ಬಹಳ ಪ್ರಾಮುಖ್ಯವಾದ ವಿಚಾರವಾಗಿರುವುದರಿಂದ ತಾವೊಂದು ತೀರ್ಮಾನ ತೆಗೆದುಕೊಂಡು ನನಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೀವು ಆ ವಿಷಯಕ್ಕೆ ಬೆಂಬಲ ವ್ಯಕ್ತಪಡಿಸಿದರೆ ಸಾಕು. ಸಿಗ್ನೇಟರೀಸ್ ಅಲ್ಲದಿದ್ದರೆ ಮಾತನಾಡಲು ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ನಾನು ತಪ್ಪೊಬ್ಬರಿಗೆ ಮಾತನಾಡಲು

ಅವಕಾಶ ಮಾಡಿಕೊಟ್ಟರೆ, ನಂತರ ಎಲ್ಲರೂ ಸಾಲಾಗಿ ಮಾತನಾಡಲು ನಿಂತು ಬಿಡುತ್ತಾರೆ. ರಾಜ್ಯಪಾಲರು ವಂದನಾ ನಿರ್ಣಯದ ಮೇಲಿನ ಚರ್ಚೆಯ ಅವಧಿಯನ್ನು ಕಡಿಮೆ ಮಾಡಲು ತಾವು ಒಪ್ಪುವುದಾದರೆ, ನಾನು ತಮಗೆ ಮಾತನಾಡಲು ಅವಕಾಶ ಮಾಡಿಕೊಡಲು ಸಿದ್ಧನಿದ್ದೇವೆ. 27ಕ್ಕಿಂತ ಮುಂದೆ ಸದನ ಹೋಗುವುದಿಲ್ಲ. ಪ್ರಶ್ನೋತ್ತರವನ್ನು ಕೈ ಬಿಟ್ಟಿದ್ದೇವೆ. ಮಾನ್ಯ ಬಿರ್ಗೆಯವರು ನಾನು 15 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ ಅಂದಿದ್ದರು. ಈಗಾಗಲೇ ಅವರು ಮಾತನಾಡಲು ಶುರು ಮಾಡಿ ಸುಮಾರು 40 ನಿಮಿಷಗಳಾಯಿತು. ಮಾತನಾಡುವುದಿದ್ದರೆ ಮಾತನಾಡಿ, ನನ್ನದೇನೂ ಆಭ್ಯಂತರವಿಲ್ಲ. ಆಮೇಲೆ ನಾನು ಶೂನ್ಯ ವೇಳೆಯನ್ನೂ ಕ್ಲೋಸ್ ಮಾಡುತ್ತೇನೆ. ನೀವು ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಿ. ಶೂನ್ಯ ವೇಳೆಯೂ ಇರಬೇಕು, ನಿಯಮ 69ರ ಚರ್ಚೆಯೂ ನಡೆಯ ಬೇಕು, ಇದರ ಮೇಲೆ ಎಲ್ಲರೂ ಮಾತನಾಡಬೇಕು, ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಎಲ್ಲರೂ ಮಾತನಾಡಬೇಕೆಂಬ ಆಸೆ ಇದ್ದರೆ, ಅದು ಕಷ್ಟವಾಗಬಹುದು. 27ನೇ ತಾರೀಖು ತರಾತುರಿಯಲ್ಲಿ ನಿರ್ಣಯ ಅಂಗೀಕಾರ ಮಾಡಬೇಕಾದಂತಹ ಪರಿಸ್ಥಿತಿ ಬರಬಹುದು. ಆ ವಿಚಾರವನ್ನು ನಿಮಗೇ ಬಿಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಾಟಾಳ್ ನಾಗರಾಜ್‌ರವರೇ ಈಗ ತಾವು ಕುಳಿತುಕೊಳ್ಳಿ. ಆಮೇಲೆ ತಮಗೆ ಮಾತನಾಡಲು ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡುತ್ತಾರೆ. ಏಕೆಂದರೆ ಅವರಿಗೆ ನಿಮ್ಮ ಮೇಲೆ ಬಹಳ ಪ್ರೀತಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಅಂದರೆ, ನೀವು ನನ್ನ ಮೇಲೆ ಪ್ರೀತಿ ಮಾಡುತ್ತಿಲ್ಲ. ಇವರೆಲ್ಲಾ ತಾವು ನನ್ನ ಮೇಲೆ ಪ್ರೀತಿ ಮಾಡುತ್ತಿದ್ದೀರಿ ಎಂದು ನನ್ನ ಮೇಲೆ ಆರೋಪಣೆ ಮಾಡುತ್ತಾರೆ. ನಾವು ಎಲ್ಲಿಗೆ ಹೋಗೋಣ? ತಾವು ನನಗೆ ಮಾತನಾಡಲು ಅವಕಾಶ ಕೊಡುವ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಿ. ನೀವು ಮಾತನಾಡಲು ಎದ್ದು ನಿಂತರೆ ಸಾಕು ನಿಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತಾರೆ ಎಂದು ಆಗಿನಿಂದಲೂ ನನ್ನ ಸುತ್ತಮುತ್ತ ಇರುವವರು ಹೇಳುತ್ತಿದ್ದಾರೆ. ಅದಕ್ಕೆ ನಾನು ಅವರಿಗೆ ಮಾನ್ಯ ಅಧ್ಯಕ್ಷರು ನನಗೆ ಹೇಗೆ ಅವಕಾಶ ಕೊಡುತ್ತಾರೋ ಎಂದು ಅವರಿಗೆ ಕೇಳಿ ಎಂದು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ಜಂಟಿ ಸದನ ಸಮಿತಿ ರಚಿಸಿ ಎಂದು ಏಕೆ ಕೇಳುತ್ತಿದ್ದೇನೆ ಎಂದರೆ ಇದರ ಸಾಧಕ ಬಾಧಕಗಳು ಗೊತ್ತಾಗುತ್ತದೆ. ಮತ್ತು ಇದು ಯಾರ ಮೇಲೂ ಆಲಿಗೇಷನ್ ಇಲ್ಲವಲ್ಲ. ನಮ್ಮ ಆಲಿಗೇಷನ್ ಇಷ್ಟೇ, ನೀವು ಪ್ರೈವೇಟ್ ಡಿಸ್ಟ್ರಿಬ್ಯೂಟರ್ಸಗಳಿಗೆ ಈ ಒಂದು ಐ.ಎಂ.ಎಫ್.ಎಲ್. ಕೊಡುವುದರಿಂದ ನಮಗೆ ಬರತಕ್ಕಂತಹ ಹಣ ಬರುವುದಿಲ್ಲ ಎನ್ನತಕ್ಕಂತಹ ವಾದವನ್ನು ನಾವು ಮಾಡಿದ್ದೇವೆ. ಇದನ್ನು ಸರಿಪಡಿಸುವುದಕ್ಕೋಸ್ಕರ ನೀವು ಏಕೆ ಒಂದು ಕಮಿಟಿ ಮಾಡಬಾರದು. ಅದಕ್ಕಾಗಿ ಒಂದು ಹೌಸ್ ಕಮಿಟಿ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಈಗ ಏನು ರೂಲ್ಸ್‌ಗಳನ್ನು ತಾವು ದಿನಾಂಕ 30.12.96ಕ್ಕೆ ಅಮೆಂಡ್‌ಮೆಂಟ್ ಮಾಡಿ ತಂದಿದ್ದೀರಿ, ಈ ರೂಲ್ಸ್ ಅನ್ನು ನೀವು ವಿತಡ್ರಾ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಸುಮಾರು 300-400 ಕೋಟಿ

ರೂ.ಗಳ ಆದಾಯ ಬರತಕ್ಕದ್ದು ಸರ್ಕಾರದ ಕೈ ತಪ್ಪಿ ಹೋಗುತ್ತದೆ. ಅದಕ್ಕಾಗಿ ಇದನ್ನು ಕೇರ್‌ಫುಲ್ಲಾಗಿ ಪರಿಶೀಲಿಸಬೇಕಾಗಿದೆ. ಇವತ್ತು ನೀವು ಇಲ್ಲಿ ಹೇಳಬಹುದು, ಹೋಗಬಹುದು. ನೀವು ಯಾರಿಗಾದರೂ ಖುಷಿ ಪಡಿಸುವುದಕ್ಕೋಸ್ಕರ ಮಾಡಬಹುದು. ಆದರೆ ಅಲ್ಟಿಮೇಟ್ಲಿ ಈ ರಾಜ್ಯದ ಸ್ಟೇಟ್ ರೆವಿನ್ಯೂವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಬೇಕಾದರೆ ಇನ್ನಷ್ಟು ಪರ್ಮಿಟ್ಸ್ ಜಾಸ್ತಿಕೊಟ್ಟು ಕೊಳ್ಳಿ. ಆದರೆ ಈ ರೀತಿಯಾಗಿ ಬರತಕ್ಕಂತಹ ಹಣವನ್ನು ಪ್ಲೋಲು ಮಾಡತಕ್ಕಂಥದ್ದು, ಅದನ್ನು ಲೀಕೇಜ್ ಆಗತಕ್ಕಂಥದ್ದನ್ನು ತಡೆ ಹಿಡಿಯುವ ಕೆಲಸವನ್ನು ನೀವು ಮಾಡದೇ ಹೋದರೆ, ನೀವು ಇದನ್ನು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದೀರಿ ಎಂದು ಹೇಳಬೇಕಾಗಿದೆ. ನಿಮಗೆ ಬೇಕಾದವರಿಗೆ ಸಹಾಯ ಮಾಡಬೇಕು ಎನ್ನತಕ್ಕಂಥ ರೀತಿಯಲ್ಲೇ ನೀವುಹೊರಟಿದ್ದೀರಿ. ಏಕೆಂದರೆ, ಇದೇ ರೀತಿಯಾದಂತಹ ಕಾರ್ಪೊರೇಷನ ಸೋಲ್ ಏಜೆಂಟ್, ತಮಿಳುನಾಡಿನಲ್ಲೂ ಕೂಡ ಇದೆ, ಕೇರಳದಲ್ಲೂ ಕೂಡ ಇದೆ. ಅಲ್ಲಿ ಕೂಡ ಶೇಕಡ 5ರಷ್ಟು ಎಕ್ಸೈಜ್ ಡ್ಯೂಟಿ ತಪ್ಪಿದರೆ ಅದು ಬಹಳ ದೊಡ್ಡದಾಯಿತು ಅಲ್ಲಿ ಅದು ಶೇಕಡ 95ರಷ್ಟು ಸಕ್ಸಸ್‌ಫುಲ್ ಇದೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಕೂಡ ಹಿಂದೆ ನಾವು ಕೇಳಿದ್ದೇವೆ ಹೇಳಿದ್ದೇವೆ. ಇವತ್ತೂ ಕೂಡ ತಾವು ಇಲ್ಲಿ ನೋಡಿಕೊಂಡು ಬಂದರೆ ತಮಗೆ ಗೊತ್ತಾಗುತ್ತದೆ.

ಅಧ್ಯಕ್ಷರೆ, ಇದರ ವರ್ಕಿಂಗ್ ಕಂಡೀಷನ್ ಯಾವ ರೀತಿ ಮಾಡಬೇಕೆಂಬುದ್ದು ತಿಳಿಯಬೇಕಾದರೆ ತಮಿಳುನಾಡು, ಕೇರಳಕ್ಕೆ ಹೋಗಿ ಅಧ್ಯಯನ ಮಾಡಿ ಅದರಂತೆ ಇಲ್ಲಿಯೂ ಮಾಡಲಿ. ಒಂದು ಸದನದ ಸಮಿತಿಯ ಅವಶ್ಯಕತೆಯಿದೆ, ಎರಡನೆಯದಾಗಿ, ಇವತ್ತು ಇರುವಂಥ ರೂಲ್ಸ್ ಅನ್ನು ತಿದ್ದುಪಡಿ ಮಾಡಿ ಏನು ನಮ್ಮಮುಂದೆ ಇಟ್ಟಿದ್ದಾರೋ, ಆ ರೂಲ್ಸನ್ನು ಕೂಡ ಹಿಂತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಲೀಕೇಜ್ ಮತ್ತು ಸೆಕೆಂಡ್ಸನ್ನು ತಪ್ಪಿಸುವುದಕ್ಕೋಸ್ಕರ ಎಂ.ಎಸ್.ಐ.ಎಲ್.ನವರು ಮೊಹರನ್ನು ಹಾಕಿ ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದಾರೋ ಅದಕ್ಕೆ ನೀವೇ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೀರಿ. ನೀವು ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಮೇಲೆ ಅದನ್ನು ತೆಗೆದು ಇವರದೇ ಆದಂತಹ ಇಂಡಿಪೆಂಡೆಂಟ್ ಮೆಕನೈಸರ್ಸ್ ಕಾರ್ಪೊರೇಷನ್ ಮಾಡಿದ್ದಾರೆ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಸರ್ಕಾರದ ಸ್ವಾಮಿತ್ವವಿರಬೇಕು, ಸರ್ಕಾರ ಇದಕ್ಕೆ ಮಾಲೀಕ ಆಗಿರಬೇಕೆಂದು ನಾನು ಹೇಳತಕ್ಕಂಥಾದ್ದು. ತಾವು ಹೇಗೆ ಸೇಲ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತೀರೋ, ಅದೇ ರೀತಿಯಲ್ಲಿ ಇದಕ್ಕೂ ಕೂಡ ಆದಾಯ ಒಂದೇ ಕಡೆ ಬರತಕ್ಕಂಥ ಸಾಧ್ಯತೆಯಿದೆ. ಅದಕ್ಕಾಗಿ ದಯವಿಟ್ಟು ಇವತ್ತನ ದಿವಸ ಈ ಒಂದು ಕೆಲಸವನ್ನು ಮಾಡಬೇಕು ಮತ್ತು ಸುಮಾರು ಪ್ರತಿ ತಿಂಗಳು 5 ಲಕ್ಷ ಕೇಸಸ್ ಅಂದರೆ ಒಂದು ವರ್ಷಕ್ಕೆ ಸುಮಾರು 60 ಲಕ್ಷ ಕೇಸಸ್ ಇವತ್ತು ಸೆಕೆಂಡ್ಸ್‌ನಲ್ಲಿ ಹೋಗುತ್ತಿದೆ. ಅದರಿಂದ 450 ಕೋಟಿ ರೂಪಾಯಿ ಲುಕ್ಸಾನಾಗುತ್ತಿದೆ. ಇದನ್ನು ತಾವು ತಡೆಯಬೇಕಾಗುತ್ತದೆ. ಇದರಿಂದ ನಿಮ್ಮ ಬೊಕ್ಕಸಕ್ಕೆ ಹಣ ಬಂದಂತಾಗುತ್ತದೆ. ಇದರಲ್ಲಿ ಉತ್ಪ್ರೇಕ್ಷೆಯಿದ್ದರೂ ಕೂಡ, ಇದರಲ್ಲಿ 100 ಕೋಟಿ ರೂಪಾಯಿ ಕಡಿಮೆಯಿದ್ದರೂ ಕೂಡ ಇವತ್ತು 450 ಕೋಟಿ ರೂಪಾಯಿಗಳಲ್ಲಿ, 350 ಕೋಟಿ ರೂಪಾಯಿ ಆದರೂ ಕೂಡ ಕನಿಷ್ಠ ಪಕ್ಷ ನಿಮಗೆ, ರಾಜ್ಯದ ಜನರಿಗೆ, ಅಭಿವೃದ್ಧಿ ಕೆಲಸಗಳಿಗೆ ಅದು ಸೇರುತ್ತದೆ. ಅದಕ್ಕಾಗಿ ದಯವಿಟ್ಟು ತಾವು ಈ ಕೆಲಸವನ್ನು ಮಾಡಬೇಕೆನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ಇವತ್ತು

ನೀವು ಈ ಒಂದು ಎಂ.ಎಸ್.ಐ.ಎಲ್. ಕೇವಲ, ಪಬ್ಲಿಕ್ ಅಂಡರ್‌ಟೇಕಿಂಗ್ ಇದೆ. ಅವರು ಭಾಗವಹಿಸಲಿ, ಬೇರೆಯವರೂ ಭಾಗವಹಿಸಲಿ. ಅದಕ್ಕಾಗಿ ತಾವು ಇದನ್ನು ಓಪನ್ ಕಂಡೀಷನ ಆಗಿ ತಂದಿದ್ದೇನೆಂದು ಹೇಳಿದರೂ ಕೂಡ ತಪ್ಪಾಗುತ್ತದೆ. ಏಕೆಂದರೆ, ಇವತ್ತಿನ ಸಂದರ್ಭದಲ್ಲೂ ಐ.ಎಂ.ಎಲ್. ಶೇಕಡ ನೂರರಷ್ಟು ಸರಬರಾಜು ಮಾಡತಕ್ಕಂಥಾದ್ದು ಇದೆ. ಎಂ.ಎಸ್.ಐ.ಎಲ್.ಗೆ ಕೇವಲ 5 ಡಿಸ್ಟಿಲರಿಗಳಿವೆ, ಅದರಲ್ಲಿ ಪಾರ್ಟ್ ಸರಬರಾಜು ಮಾಡತಕ್ಕಂಥ 11 ಡಿಸ್ಟಿಲರಿಗಳಿವೆ ಮತ್ತು ಸಗಟು ಮಾರಾಟಗಾರರಿಗೆ ಅವರೇ ನೇರವಾಗಿ ಸರಬರಾಜು ಮಾಡುತ್ತಾರೆ. ಅದು ಸುಮಾರು 20 ಇದೆ. ಅಂದರೆ, ಸುಮಾರು 31 ಡಿಸ್ಟಿಲರಿಗಳಲ್ಲಿ ಯಾವ ರೀತಿಯಾಗಿ 5 ಡಿಸ್ಟಿಲರಿಗಳು ಶೇಕಡ ನೂರರಷ್ಟು ಮಾಡುತ್ತವೆ, ಆ ರೀತಿಯಾಗಿ ಮಾಡಿದರೆ, ಇವತ್ತು 100 ಪರ್ಸೆಂಟ್ ಟರ್ನ್‌ಓವರ್ ಇದ್ದಿದ್ದು, ಖಂಡಿತವಾಗಿ ಅವರೇ ಮೆಮೊರಾಂಡಂ ಆಫ್ ಅಪಿಡವಿಟ ಕೊಟ್ಟಿರುವ ಪ್ರಕಾರ, ಸಾವಿರ ಕೋಟಿ ರೂಪಾಯಿ ನಿಮ್ಮ ಜೊಕ್ಕಸಕ್ಕೆ ಅವರು ತಂದು ಹಾಕುವಂತಹ ಸಾಧ್ಯಥೆ ಇದೆ ಎನ್ನವಂತಹ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದಕ್ಕಾಗಿ ಸದನದ ಸಮಿತಿಯನ್ನು ಮಾಡಿ, ಆಮೇಲೆ ಒಂದು ಕಾರ್ಪೊರೇಷನ್ ಮಾಡಿ ಎಂ.ಎಸ್.ಐ.ಎಲ್ ಅನ್ನು ಸೋಲ್ ಏಜೆಂಟ್ ಮಾಡಿ ಆಮೇಲೆ, ದಿ:30.12.96ರಂದು ನೀವು ಏನು ಈ ಕಾನೂನನ್ನು ತಿದ್ದುಪಡಿ ಮಾಡಿ ತಂದಿದ್ರಿ, ಆ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾಗಿದೆ. ತಾವು ನನಗೆ ಇಷ್ಟು ಸಮಯ ಮಾತಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಬೇಕಾದರೆ ಇದನ್ನು ಚರ್ಚೆಗೆ ತೆಗೆದುಕೊಳುತ್ತೇವೆಂದರೂ ಕೂಡ, ಉಳಿದ ವಿಷಯಗಳನ್ನು ನಾನು ಪ್ರಸ್ತಾಪ ಮಾಡಲು ಸಿದ್ದನಿದ್ದೇನೆ. ದಯವಿಟ್ಟು ಈ ಒಂದು ದಿಕ್ಕಿನಲ್ಲಿ ಅವರು ಕೆಲಸ ಮಾಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು 11.10ಕ್ಕೆ ಚರ್ಚೆಯಲ್ಲಿ ಪ್ರಾರಂಭ ಮಾಡಿ ಸುಮಾರು 40 ನಿಮಿಷಗಳ ಕಾಲವನ್ನು ತೆಗೆದುಕೊಂಡಿದ್ದೀರಿ. ತಾವು, ವಾಟಾಳ ನಾಗರಾಜರವರು ಮತ್ತು ರೆಡ್ಡಿಯವರು ಸಹಿ ಮಾಡಿಲ್ಲ. ನೀವು ಮೂವರೂ ಸೇರಿ 12.05 ನಿಮಿಷದೊಳಗೆ ಮುಗಿಸಬೇಕು. ಇದು ಬಹಳ ಪ್ರಮುಖವಾದ ವಿಷಯ. ನೀವು ಸಹಿ ಹಾಕಿಲ್ಲದಿದ್ದರೂ ನಾನು ನಿಯಮಾವಳಿಯನ್ನು ಸಡಿಲಗೊಳಿಸಿ ನಿಮಗೆ ಅವಕಾಶ ಕೊಡುತ್ತಿದ್ದೇನೆ.

+ಶ್ರೀ ವೈ. ರಾಮಕೃಷ್ಣ : ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ಸಮಯವನ್ನು ನಿಗದಿ ಮಾಡಿಕೊಟ್ಟದ್ದಕ್ಕಾಗಿ ತಮಗೆ ನನ್ನ ಧನ್ಯವಾದಗಳು. ಇದು ರಾಜ್ಯದ ಬೊಕ್ಕಸಕ್ಕೆ ಸಂಬಂಧಪಟ್ಟ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಸುದೀರ್ಘವಾಗಿ ಭಾಷಣ ಮಾಡಿದ್ದಾರೆ. But I don't know what locus- standi he has got to bring it before the House ಏಕೆಂದರೆ, ಅವರ ಮಂತ್ರಿಮಂಡಲದಲ್ಲೇ ಅವರು ಮಂತ್ರಿಯಾಗಿದ್ದಾಗ, ಅವರ ಪಕ್ಷದ ಶ್ರೀ ಮೊಯಿಲಿಯವರು ಇವತ್ತು ಜೆಎಂಎಂ ಪ್ರಕರಣದಲ್ಲಿ ಇನವಾಲ್ವ ಆಗಿದ್ದಾರೆ. ಇದು ಏನನ್ನು ತೋರಿಸುತ್ತದೆ? ಸರ್ಕಾರಕ್ಕೂ, ಮಧ್ಯ ತಯಾರಕರಿಗೂ, ಡಿಸ್ಟಿಲರಿಗಳಿಗೂ ಒಂದು ಸಂಬಂಧವಿದೆ ಎಂಬುದನ್ನು ಇದು ತೋರಿಸುತ್ತದೆ.

SRI M.MALLIKARJUNA KHARGE : Don't mix up the issues. You have come as an agent of the Janata Dal.

ಶ್ರೀ ವೈ. ರಾಮಕೃಷ್ಣ : ಇಲ್ಲಲ್ಲ. I am presenting the history. ನಾನು ಅವರ ಮೇಲೆ ಆರೋಪ ಹೊರಿಸುತ್ತಿಲ್ಲ. ಹಿಂದಿನ ಸರ್ಕಾರದಲ್ಲೂ ಕೂಡ ಈ ರೀತಿ ಇರುವುದಕ್ಕೆ ಸಾಕಷ್ಟು ಪುರಾವೆಗಳು ನನ್ನಲ್ಲಿವೆ. ಅದು ತಮಗೂ ಗೊತ್ತಿದೆ. ನಾನು ಆ ವಿವರಗಳ ಬಗ್ಗೆ ಚರ್ಚಿಸುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಕಾನೂನು ತಂದವರೇ ನಾವು.

ಶ್ರೀ ವೈ. ರಾಮಕೃಷ್ಣ : ಕೋಪ ಏತಕ್ಕೆ ಮಾಡಿಕೊಳ್ಳುತ್ತೀರಿ?

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೊಂದು ವಿಷಯ ಪ್ರಸ್ತಾಪ ಮಾಡಿ, ಆಗ ನೀವು ಏನು ಹೇಳಬೇಕೋ ಹೇಳಿ. ಈಗ ಈ ವಿಷಯದಲ್ಲಿ ಏನು ಹೇಳಬೇಕೋ ಹೇಳಿ.

ಶ್ರೀ ವೈ. ರಾಮಕೃಷ್ಣ : ಹಿಂದಿನ ಇತಿಹಾಸವನ್ನೆಲ್ಲಾ ಹೇಳಬೇಕೇ, ಬೇಡವೇ?

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆ ದಿವಸ ನನ್ನನ್ನು ಭೇಟಿಯಾಗಿ ಇವತ್ತು ನನ್ನ ನೋಟೀಸನ್ನು ಕಳುಹಿಸಿಕೊಡುತ್ತೇನೆ, ಅದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಅದನ್ನೆಲ್ಲಾ ನಾನು ಅಭ್ಯಾಸ ಮಾಡಿದ ಮೇಲೆ ತಾವು ಪ್ರಸ್ತಾಪ ಮಾಡಿ ಎಂದು ಕೂಡ ಹೇಳಿದ್ದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಸನ್ನೆ ಮುಖಾಂತರ ನನಗೆ ಏನು ಕೇಳಿದ್ದಾರೆಂದರೆ, ಅವರು ನೋಟೀಸ್ ಕಳುಹಿಸಿಕೊಟ್ಟಿದ್ದಾರೆ, ಆದರೆ, ನಾನು ಅದಕ್ಕೆ ಸಹಿ ಹಾಕಿಲ್ಲ. ಆದರೂ ಸಹ ರಾಜ್ಯದ ಹಿತದೃಷ್ಟಿಯಿಂದ ಅದು ಪ್ರಮುಖವಾದ ವಿಚಾರವಾದ್ದರಿಂದ, ನನಗೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿರತಕ್ಕಂಥ ಒಟ್ಟು ವಿಚಾರದ ತಿರುಳೇನೆಂದರೆ, ಸರ್ಕಾರ ಈಗ ತರಬಯಸಿರತಕ್ಕಂಥ ತಿದ್ದುಪಡಿಯಿಂದ ರಾಜ್ಯ ಬೊಕ್ಕಸಕ್ಕೆ ನಷ್ಟವಾಗುತ್ತದೆಂಬುದು. ತಾವು ಅದಕ್ಕೆ ಸಂಬಂಧಪಟ್ಟಂತೆ ಏನಾದರೂ ಪ್ರತಿಪಾದನೆ ಮಾಡುವುದು ಇದ್ದರೆ ಮಾಡಿ, ಉಳಿದ ವಿಚಾರಗಳನ್ನು ನಾನು ಹೇಳುತ್ತೇನೆಂದರೆ, ತಾವು ಅದಕ್ಕೆ ಒಂದು ಪ್ರಶ್ನೆ ಕೇಳಿದಿರಿ about locus standi..

(ಗೊಂದಲ)

MR. SPEAKER : He is the leader of the Opposition and he is a member of the House. This is a matter concerning the state government. He is totally justified in raising this issue on the floor of the House. Likewise, whatever issue you want to raise you have ample of opportunities. You are well within your limits to raise this matter. I don't say, no. But, under the present rule you will not be in a position to refer matters that don't concern the issue right before the

House. You are a learned man. But still you have to do your job as the second largest opposition party. ಇದನ್ನು ನಾನು ತಮಗೆ ಹೇಳಬೇಕೆ?

ಶ್ರೀ ವೈ. ರಾಮಕೃಷ್ಣ : ತಾವು ನನಗೆ ನ್ಯಾಯವನ್ನು ದೊರಕಿಸಿಕೊಡಬೇಕು. I have to read in between the lines. We have not formed the government. ನಾವು ಇಂಥದ್ದರಲ್ಲಿ ಸಿಕ್ಕಿಲ್ಲ. ನಮಗೆ ಪ್ರಶ್ನಿಸುವ ಅಧಿಕಾರವಿದೆ.

ಅಧ್ಯಕ್ಷರು : ಎರಡನೆಯ ಬಹು ದೊಡ್ಡ ವಿರೋಧ ಪಕ್ಷವಾದ ನಿಮ್ಮ ಆತಂಕ ನನಗೆ ಅರ್ಥವಾಗುತ್ತದೆ. ಮತ್ತೊಮ್ಮೆಯಾವುದಾದರೂ ಬೇರೆ ರೂಪದಲ್ಲಿ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ. ಈಗ ಈ ವಿಷಯಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ವೈ. ರಾಮಕೃಷ್ಣ : ಹಿಂದೆ, ಶ್ರೀಮಾನ್ ವೀರೇಂದ್ರ ಪಾಟೀಲರು ಅಧಿಕಾರ ವಹಿಸಿಕೊಳ್ಳುವುದಕ್ಕೆ ಮುಂಚೆ ಬೊಕ್ಕಸ ಖಾಲಿಯಾಗಿತ್ತು. ಶ್ರೀ ರಾಜಶೇಖರ ಮೂರ್ತಿಯವರು ಎಕ್ಸೈಸ್ ಮಂತ್ರಿಗಳಾಗಿ ಬಂದ ಮೇಲೆ ಕಾನೂನಿಗೆ ತಿದ್ದುಪಡಿ ತಂದು ಇದನ್ನು ಸೋಲ್ ಏಜೆನ್ಸಿಯಾದ ಎಂ.ಎಸ್.ಐ.ಎಲ್.ಗೆ ಕೊಟ್ಟಮೇಲೆ ಬೊಕ್ಕಸ ತುಂಬಿತು. ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಅವಕಾಶವಾಯಿತು. ಇದು ಇತಿಹಾಸ. ಇದನ್ನು ಹೇಳಬಾರದೆಂದರೆ, ನಮಗೆ ಹಕ್ಕಿದೆ ನಾವು ಹೇಳಿದ್ದೇವೆ. ಹೈಕೋರ್ಟಿಗೆ ಡಿಸ್ಟಿಲರಿಯವರು ಹೋದಾಗ, ಅವರ ವಿರುದ್ಧವಾಗಿ ಸರ್ಕಾರದ ಅಡ್ವೋಕೇಟ್-ಜನರಲ್‌ರವರು ವಾದ ಮಾಡಿದ್ದಾರೆ. ಪ್ಲೀಡಿಂಗ್ಸ್, ಅಫಿಡವಿಟ್ ಮತ್ತು ಜಡ್ಜ್‌ಮೆಂಟ್ ಜೊತೆಗೆ ಸುಪ್ರೀಂ ಕೋರ್ಟ್‌ಗೆ ಹೋದರು. ಸುಪ್ರೀಂ ಕೋರ್ಟ್‌ನಲ್ಲಿ ನಮ್ಮವಾದ, ಪ್ಲೀಡಿಂಗ್ಸ್ ಮತ್ತು ನಾವು ಹಾಕಿರತಕ್ಕ ಅಫಿಡವಿಟ್ ಏನು? ಒಂದು ವೇಳೆ, ಈ ಸೋಲ್ ಏಜೆನ್ಸಿಯನ್ನು ಸರ್ಕಾರ ತೆಗೆದುಕೊಳ್ಳದಿದ್ದರೆ, ಏನು ಅನಾಹುತ ವಾಗುತ್ತಿತ್ತೆಂಬುದರ ಬಗ್ಗೆ ಅವರೇ ಹೇಳಿದ್ದಾರೆ. ಒಂದು ವೇಳೆ ಇದು ಸೋಲ್ ಏಜೆನ್ಸಿ ಸರ್ಕಾರ ತೆಗೆದುಕೊಳ್ಳದೆ ಇದ್ದರೆ, ಸರ್ಕಾರಕ್ಕೆ ಏನು ಅನಾಹುತ ಆಗುತ್ತದೆ ಎಂದು ಅವರು ಹೇಳಿದ್ದಾರೆ, ನಾನು ಹೇಳುವುದು ಬೇಡ. ಏಕೆಂದರೆ, ಇದು ದಿವಸಕ್ಕೆ ಎರಡು ಕೋಟಿ ಅಂದರೆ ತಿಂಗಳಿಗೆ 60 ಕೋಟಿ, ವರ್ಷಕ್ಕೆ ಎಷ್ಟಾಗಬಹುದು, ತಾವು ನನ್ನನ್ನು ಹಣಕಾಸು ಸಮಿತಿಯ ಅಧ್ಯಕ್ಷನಾಗಿ ಮಾಡಿದ್ದೀರಿ.

ಅಧ್ಯಕ್ಷರು : ನನಗೆ ಒಂದು ಗಾದೆ ನೆನಪಾಗುತ್ತದೆ, 'ಊರೆಲ್ಲಾ ಜಂಗಮರೇ, ಕೋಳಿ ಹೋದ ದಾರಿ ಗೊತ್ತಿಲ್ಲ'.

ಶ್ರೀ ವೈ. ರಾಮಕೃಷ್ಣ : ಇವತ್ತು ಏನಾಗಿದೆ 1995-96ರಲ್ಲಿ 850 ಕೋಟಿಯಿಂದ ಸುಮಾರು 700 ಕೋಟಿ ರೂಪಾಯಿಗೆ ಬರಬಹುದು. ಇವತ್ತು ಆರು ನೂರುಕೋಟಿ ಇದೆ, ಪುನಃ ಇನ್ನು ಒಂದು ತಿಂಗಳಲ್ಲಿ 100 ಕೋಟಿ ಮಾಡಿ ಬಿಡುತ್ತೇವೆಂದು ಇಟ್ಟುಕೊಳ್ಳಿ, ಅದು ಕೂಡ ಲಾಸ್ ಆಗುತ್ತದೆ. ಅರ್ಥ ಏನು, 1,500 ಕೋಟಿ ರೂಪಾಯಿ ಆದರೆ ನಾವು ಯಾರಿಗೆ ಕೇಳಬೇಕು, ತಾವು ಆಲೋಚನೆ ಮಾಡಬೇಕು. ಈ ಗವರ್ನಮೆಂಟ್ ಮತ್ತು ಈ ಡಿಸ್ಟಿಲರೀಸ್ ಮಧ್ಯೆ ಪೊಲಿಟಿಕಲ್ ನೆಕ್ಸಸ್ ಇದೆ. ಈ ವಿಚಾರದಲ್ಲ ನಾನು ಇದನ್ನು ಹೇಳಿದೆ, ಅಷ್ಟೇ ಹೊರತು ಅವರನ್ನು ನಾನು ಟೀಕಿಸಬೇಕೆಂದು ಅಲ್ಲ. ದಯವಿಟ್ಟು ಕ್ಷಮಿಸಬೇಕು.

ಅಧ್ಯಕ್ಷರು : ಏನಾಗಿದೆ, ಒಂದು ಗಾದೆ ಹೇಳಿದೆ, ಸುಮಾರು ವರ್ಷಗಳಿಂದ ನಾವೆಲ್ಲಾ ಸಾರ್ವಜನಿಕ ಬದುಕಿಗೆ ಬಂದ ಮೇಲೆ, ಈ ವಿಚಾರದಲ್ಲಿ ಅನೇಕ ಗಂಭೀರವಾದ ಚರ್ಚೆಗಳನ್ನು ನಾವು ಕೇಳುತ್ತಿದ್ದೇವೆ. ಊರ ತುಂಬ ಜಂಗಮರೆ ಇದ್ದಾರೆ, ಕೋಳಿ ಹೋದ ದಾರಿ ಪತ್ತೆ ಆಗುತ್ತಿಲ್ಲ..ಊರ ತುಂಬ ಜಂಗಮರು, ಯಾರು ನಾನ್‌ವೆಜಿಟೇರಿಯನ್ಸ್ ಇಲ್ಲ, ಕೋಳಿ ಹೇಗೆ ಹೋಯಿತು ಎಂದು ಯಾರಿಗೂ ಗೊತ್ತಿಲ್ಲ.

ಶ್ರೀ ವೈ. ರಾಮಕೃಷ್ಣ : ಅಧ್ಯಕ್ಷರೆ, ಇವತ್ತು ಏನಾಗಿದೆ, ಮೈಸೂರು ಜಿಲ್ಲೆಯಲ್ಲಿ ಹರಿಜನ ಕೇರಿಗಳಲ್ಲಿ ಕಡಲೆ ಕಾಯಿ ತಿನಿಸು ಮಾರುತ್ತಾರೆ, ಆ ರೀತಿ ಇವತ್ತು ಸಾರಾಯಿ ಪ್ಯಾಕೆಟ್ ಮಾರುತ್ತಿದ್ದಾರೆ. ನಾನು ಇವತ್ತು ಧೈರ್ಯವಾಗಿ ಹೇಳುತ್ತಿದ್ದೇನೆ, ಮೈಸೂರು ಜಿಲ್ಲೆಯಲ್ಲಿ ಕೆಲವು ಭಾಗದ ಹರಿಜನ ಕಾಲೋನಿಗಳಲ್ಲಿ ಪ್ರತಿನಿತ್ಯ ಕೂಡ ಕಡಲೆ ಕಾಯಿ ಬೋಂಡ, ಚಿಕ್ಕಲಿ ಮಾರುವ ತರಹ ಸಾರಾಯಿ ಪ್ಯಾಕೆಟಗಳನ್ನು ಮಾರಾಟ ಮಾಡುತ್ತಿದ್ದಾರೆ. ಏಳು ರೂಪಾಯಿಗೆ ಕೊಡುತ್ತಿದ್ದರೆ, ಒಂದು ರೂಪಾಯಿ ಜಾಸ್ತಿ ಮಾಡಿ ಹರಿಜನ ಕೇರಿಗೆ ಹಂಚುತ್ತಿದ್ದಾರೆ, ಸಾಲ ಕೊಡುತ್ತಿದ್ದಾರೆ. ಇದನ್ನು ನಾನು ಪ್ರೂವ್ ಮಾಡುವುದಕ್ಕೆ ತಯಾರಾಗಿದ್ದೇನೆ. ಕಾರಣ ಯಾರು? ಪ್ರೈವೇಟ್ ಡಿಸ್ಟ್ರಿಬ್ಯೂಷನ್ ಬೇಕಾ? ನಿಮಗೆ ಇಂಥದ್ದು ನೋಡಬೇಕಾ? ಬೀದಿ ಬೀದಿಯಲ್ಲಿ, ಕೇರಿ ಕೇರಿಗಳಲ್ಲಿ ಇದು ನಿಲ್ಲಿಸಬೇಕು. ನಿಲ್ಲಿಸಬೇಕಾದರೆ ನಾವು ಏನು ಮಾಡಬೇಕು, ಇದು ಬಹಳ ಮುಖ್ಯವಾದ ಪ್ರಶ್ನೆ. Have it under you control. ಡಿಸ್ಟಿಲರೀಸ್‌ಗೆ ನಾವು ಲೈಸನ್ಸ್ ಕೊಟ್ಟಿದ್ದೀರಿ, ಮ್ಯಾನಿಫ್ಯಾಕ್ಚರ್ ಮಾಡುತ್ತಾರೆ, Have it under your control for distribution. ನೀವೇ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಾಡಿ ಇವತ್ತು ಈ ರೂಲ್ಸ ನೋಟೀಫೀಕೇಷನ್ ಅಮೆಂಡ್‌ಮೆಂಟ್‌ಗೆ ತಂದಿರತಕ್ಕಂತಹ ರಹಸ್ಯ ಏನು? ಎಂದು ನಾನು ಕೇಳುತ್ತಿದ್ದೇನೆ. ಇದು ಬಹಿರಂಗಪಡಿಸುವುದಕ್ಕೆ ನಿಮಗೆ ಧೈರ್ಯ ಇದೆಯೋ? ನಿಮಗೆ ಧೈರ್ಯ ಇದ್ದರೆ, ಆತ್ಮ ಇದ್ದರೆ, ನೀವು ಈ ರೀತಿ ಮಾಡುತ್ತಿದ್ದಿರೋ? ಎಂ.ಎಸ್.ಐ.ಎಲ್.ನವರು ನಿಮ್ಮ ಮೇಲೆ ಬಿಟ್ಟಿದ್ದಾರೆ, ಅಬ್ಜೆಕ್ಷನ್ ಹಾಕಿದ್ದಾರೆ, ಎಂಪ್ಲಾಯೀಸ್ ಯೂನಿಯನ್‌ನವರು ಅಬ್ಜೆಕ್ಷನ್ ಹಾಕಿದ್ದಾರೆ. ಈ ಸದನದ ಅರ್ಧ ಸದಸ್ಯರು ಅಬ್ಜೆಕ್ಷನ್ ಹಾಕುತ್ತಿದ್ದೇವೆ, ಇದು ವಿತ್‌ಡ್ರಾ ಮಾಡಬೇಕು. ಇದಕ್ಕಿಂತ ಇನ್ನು ಏನು ಬೇಕು, ಹೆಚ್ಚು ಕಡಿಮೆ ಅರ್ಧ ಪಾಪುಲೇಷನ್ ಆಯಿತು. ಇದನ್ನು ವಾಪಸ್ಸ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಏತಕ್ಕೆ ಹೇಳುತ್ತಿದ್ದೇವೆ ಎಂದರೆ ಗುಟ್ಟು ಹೊರಗೆ ಬರುತ್ತದೆ. ಗುಟ್ಟು ಹೊರಗೆ ಬರುವ ಕಾಲ ಬರುತ್ತದೆ. ಬಹಳ ಜಾಗ್ರತೆ ವಿಬರುತ್ತದೆ. ಈ ವಿಚಾರದಲ್ಲಿ ಒಂದು ವಿಚಾರ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ತಮಿಳುನಾಡಿನಲ್ಲಿ ಏನು ಮಾಡಿದ್ದಾರೆ, ಇದೇ ತರಹ ಪ್ರಶ್ನೆ ಬಂದಾಗ ತಮಿಳುನಾಡು ಮಾರ್ಕೆಟಿಂಗ್ ಕಾರ್ಪೊರೇಷನ್ ಸೋಲ್ ಏಜೆನ್ಸಿ ಫಾರ್ ಡಿಸ್ಟ್ರಿಬ್ಯೂಷನ್. ಯಾವುದಾದರೂ ಒಂದು ರಾಜ್ಯದಲ್ಲಿ ಪ್ರೈವೇಟಾಗಿ ಡಿಸ್ಟ್ರಿಬ್ಯೂಷನ್ ಮಾಡಿಕೊಂಡು ಕೇರಿ ಕೇರಿಗೆ ಹಂಚಿಕೊಂಡು ಹೋಗತಕ್ಕಂತಹ ರಾಜ್ಯ ಯಾವುದಾದರೂ ಇದೆಯಾ? ನಾನು ಹೇಳುವುದು, ಎಲ್ಲೆಲ್ಲಿ ಯಾವ ಯಾವ ವಸ್ತು ಇಡಬೇಕು ಅಲ್ಲಿ ಆ ವಸ್ತು ಇಡಿ. ಲಿಕ್ಕರ್ ಇಡುವ ಜಾಗದಲ್ಲಿ ಲಿಕ್ಕರ್ ಇಡಿ. ಹಣ ಇಡುವ ಜಾಗದಲ್ಲಿ ಹಣ ಇಟುಕೊಳ್ಳಿ. ಆದರೆ ಲಿಕ್ಕರೆ ನಾವು ಎನ್‌ಕರೇಜ್ ಮಾಡುತ್ತೇವೆಂದ ಕೇರಿ ಕೇರಿಗೆ ಸಾರಾಯಿ ಬಾಟಲಿಗಳನ್ನು ನಾವು ತೆಗೆದುಕೊಂಡು ಹೋಗಿ ಕೊಟ್ಟರೆ, ಅದಕ್ಕೆ ನಾವು ಏನು ಹೇಳಬೇಕು? ಅದಕ್ಕೋಸ್ಕರವಾಗಿ

ಮಾನ್ಯ ನಾಯಕರು ಏನು ಹೇಳಿದ್ದಾರೆ, ಹೌಸ್ ಕಮಿಟಿ ಮಾಡಬೇಕೆಂದು ಹೌಸ್ ಕಮಿಟಿ ಮಾಡುವುದು, ಯಾವ ವಿಚಾರದಲ್ಲಿ ಎಂದರೆ What made this Government to issue this Order amending Rule 3? ಸದ್ಯ ಯೋಚನೆ ಮಾಡುವುದಕ್ಕೆ ಒಂದು ಕಮಿಟಿ ಮಾಡಬೇಕು. ಅಷ್ಟು ನೀವು ಮಾಡಿದರೆ, I would like to go through the pleadings and affidavits filed in High Court and Supreme Court. ಇದನ್ನು ಡೀವಿಯೇಟ್ ಮಾಡುವುದಕ್ಕೆ ಏನು ಸಂಬಂಧ? ರಾಜ್ಯದ ಜನತೆಗೆ ಮೋಸ ಮಾಡಿದ ಹಾಗೆ ಆಗುತ್ತದೆ. ರೆವಿನ್ಯೂಗೆ ನಾವು ಧಕ್ಕೆ ತಂದ ಹಾಗೆ ಆಗುತ್ತದೆ, ರಿಸೋರ್ಸಸ್ ಕಡಿಮೆ ಮಾಡಿದ ಹಾಗೆ ಆಗುತ್ತದೆ. ವಾರ್ಷಿಕ ಯೋಜನೆ 5,000 ಕೋಟಿ ರೂಪಾಯಿಗೂ ಕಡಿಮೆ ಆಗುತ್ತದೆ. This is the main reason. This is one of the reasons. ಮೊದಲನೆಯದು ರಿಸೋರ್ಸಸ್ ಇನ್‌ಕ್ರೀಸ್ ಮಾಡಲಿಲ್ಲ, ಎಕಾನಮಿ ಮಾಡಲಿಲ್ಲ, ಬರಬೇಕಾದ ಬಾಕಿ ವಸೂಲು ಮಾಡಲಿಲ್ಲ. ಬರಬೇಕಾದ ಟ್ಯಾಕ್ಸ್ ಏನು ಇದೆ, ಎಕ್ಸೈಸ್ ಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್, ಇವೆರಡನ್ನು ಕಲೆಕ್ಟ್ ಮಾಡುವುದರಲ್ಲಿ ವಿಫಲರಾಗಿದ್ದೀರಿ. ಈ ಎಲ್ಲದರ ಪರಿಣಾಮವಾಗಿ ವಾರ್ಷಿಕ ಯೋಜನೆ 5,000 ಕೋಟಿ ರೂಪಾಯಿಯೆಂದು ಏನು ಹೇಳಿದರು, ಸುಮಾರು 7,000 ಕೋಟಿ ರೂಪಾಯಿ ಆಗುತ್ತದೆ. This is the direct reflection. ಅದಕ್ಕೆ ನಾನು ಹೇಳುತ್ತಿದ್ದೇನೆ, ದಯವಿಟ್ಟು ನೀವು ಆತುರಪಟ್ಟು ಅಮೆಂಡ್ ಮಾಡುವುದಕ್ಕೆ ಹೋಗಬಾರದು. ಈ ಸದನದಲ್ಲಿ ಏನು ಆಕ್ಷೇಪಣೆ ಎತ್ತಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಸದನ ಸಮಿತಿ ಮಾಡಿ After going through the pleadings and judgements of the Supreme Court? What are circumstances leading to issue this Order? ಇಲ್ಲದಿದ್ದರೆ ಏನಾಗುತ್ತದೆ, ನೀವು ಜನರಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ನಾನು ಕಂಟೆಂಪ್ಟ ಆಫ ಕೋರ್ಟ್ ಎಂದು ಹೇಳುವ ಪ್ರಶ್ನೆ ಅಲ್ಲ, ಇದನ್ನು ಮೀರಿಸುತ್ತಿದೆ. ಏಕೆಂದರೆ, ಇಷ್ಟೊಂದು ಜನಗಳಿಗೆ ಮೋಸ ಮಾಡಿದ ಹಾಗೆ ಆಗುತ್ತದೆ. ಅದಕ್ಕೋಸ್ಕರ ಸದನ ಸಮಿತಿ ಮಾಡಬೇಕು. ಈ ಸರ್ಕಾರ ಮಾಡಿದ ಆರ್ಡರ್ ವಿತ್‌ಡ್ರಾ ಮಾಡಬೇಕು. ಡಿಸ್ಟ್ರಿಬ್ಯೂಷನ್ ಒಂದು ಹತೋಟಿಯಲ್ಲಿ ಇಟ್ಟುಕೊಳ್ಳಿ. ಹತೋಟಿಯಲ್ಲಿ ಇಟ್ಟುಕೊಳ್ಳದೆ ಹೋದರೆ ರಾಜ್ಯ ಸರ್ವ ನಾಶವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ANNOUCEMENT

MR. SPEAKER : It is a great pleasure that the Hon'ble Elizabeth Kirkby, MLC in the New South Wales Parliment, Sydney, Australia, has visited this House and she is at present sitting in the distinguished gallery. On behalf of myself and members of this House, I welcome her to witness the proceedings of the House.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕಂತಹ ನಿಲುವಳಿ ಸೂಚನೆಯನ್ನು ಬೆಂಬಲಿಸುತ್ತಾ, ಸಂಪೂರ್ಣ ಪಾಸ

ನಿರೋಧ ಜಾರಿಗೆ ತರಬೇಕೆಂದು ಆಗ್ರಹಿಸುತ್ತೇನೆ. ಈ ಸದನದಲ್ಲಿ ನನ್ನದೇ ಆದ ಒಂದು ಖಾಸಗಿ ನಿರ್ಣಯ ಬೇರೆ ಇದೆ, ನಾನು ಅದನ್ನು ಮತ್ತೊಮ್ಮೆ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬೇಕು. ಇದರಲ್ಲಿ ಬರತಕ್ಕಂಥದ್ದು 750 ಕೋಟಿ ರೂಪಾಯಿ ಇರಬಹುದು, 700 ಕೋಟಿ ರೂಪಾಯಿ ಇರಬಹುದು, ಈ ಜನರಿಗೆ ವಿಷವನ್ನು ಕುಡಿಸಿ ಆ ವಿಶದ ಹಣದಿಂದ ನಾವು ಅಭಿವೃದ್ಧಿ ಕಾರ್ಯ ಮಾಡುವ ಬದಲು, ಒಂದು ಪ್ರಾಮಾಣಿಕ ಚಿಂತನೆ ಸರ್ಕಾರಕ್ಕೆ ಬಂದು ಪಾನ ನಿರೋಧವನ್ನು ಗಟ್ಟಿಯಾಗಿ ನಾವು ದಿಟ್ಟತನದಿಂದ ಮಾಡುತ್ತೇವೆಂದು ಹೇಳತಕ್ಕಂತಹ ನಿರ್ಧಾರವನ್ನು ಸರ್ಕಾರ ಕೈಗೊಳ್ಳಲಿ ಎನ್ನುವುದು ನನ್ನ ಒತ್ತಾಯ. ಇದರ ಜೊತೆಗೆ ಸರ್ಕಾರ ಒಂದೂವರೆ ಎರಡು ವರ್ಷಗಳ ಹಿಂದೆ ಸಾರಾಯಿ ಸಂಪೂರ್ಣವಾಗಿ ನಿಶೇಧ ಮಾಡುತ್ತೇವೆ, ಸಾರಾಯಿ ನಿಲ್ಲಿಸುತ್ತೇವೆ ಎಂದು ಒಂದಲ್ಲ ಅನೇಕ ಬಾರಿ ಹೇಳಿದೆ. ಜೊತೆಗೆ ಅವರ ಪಕ್ಷದ ಪ್ರಣಾಳಿಕೆಯಲ್ಲಿ ಮೊದಲನೇ ಆದ್ಯತೆ ಸಂಪೂರ್ಣವಾಗಿ ಸಾರಾಯಿಯನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ. ಈಗಾಗಲೇ ಎರಡು ವರ್ಷ ಎರಡು ತಿಂಗಳ ಆಯಿತು, ಇವರ ಸರ್ಕಾರದ ಇಬ್ಬರು ಮುಖ್ಯ ಮಂತ್ರಿಗಳಾಗಿದ್ದಾರೆ, ಇನ್ನು ಅದಕ್ಕೆ ಯಾವುದೇ ಒಂದು ಒತ್ತು ಸರಿಯಾಗಿ ಕೊಡದೆ, ಉಪ ಸಮಿತಿಗಳು ರಚನೆಯಾಗುತ್ತದೆ ಹೊರತು, ಸಾರಾಯಿ ನಿಲ್ಲಿಸುವ ಬಗ್ಗೆ ಇನ್ನು ಸ್ಪಷ್ಟ ನಿರ್ಧಾರ ಇಲ್ಲ. ಈಗಾಗಲೇ ಮೊನ್ನೆ ಹುಬ್ಬಳ್ಳಿಯಲ್ಲಿ ಸಹ ಅವರ ಭಾಷಣದಲ್ಲಿ ಹೇಳಿದ್ದಾರೆ, ಸಂಪೂರ್ಣ ಸಾರಾಯಿಯನ್ನು ನಿಲ್ಲಿಸುತ್ತೇವೆ, ಅದರ ಬದಲಾಗಿ ಬೇರೆ ರೂಪದಲ್ಲಿ ಶೀಶೆಯಲ್ಲಿ ಮಾರತಕ್ಕಂತಹ ಬಹಳ ಕಡಿಮೆ ದರ್ಜೆಯಲ್ಲಿ ಮಾರತಕ್ಕಂಥದ್ದು ತಯಾರು ಮಾಡಬೇಕು, ಅದರ ಬಗ್ಗೆ ನಾವು ಯೋಚನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನನಗನ್ನಿಸುವುದು ಇದನ್ನು ತೆಗೆದು ಅದನ್ನು ಕೊಡುವ ಬದಲು ಸಂಪೂರ್ಣವಾಗಿ ನಿಲ್ಲಿಸುವುದು ಒಳ್ಳೆಯದು. ಅದರಿಂದ ಪಾನನಿರೋಧವನ್ನು ಜಾರಿಗೆತರತಕ್ಕಂತಹ ದಿಟ್ಟ ನಿರ್ಧಾರವನ್ನು ಸರ್ಕಾರ ಮಾಡಬೇಕು. ಎರಡನೆಯದಾಗಿ ವಿರೇಂದ್ರ ಪಾಟೀಲರ ಸರ್ಕಾರದಲ್ಲಿ ನಿಜವಾದ ಒಂದು ಎಚ್ಚರ ಭಯ ಭೀತಿ ಬಂದಿತ್ತು. ರಾಜಶೇಖರ ಮೂರ್ತಿಯವರನ್ನು ನೆನಪಿಸಿಕೊಳ್ಳಬೇಕು. ಹಣಕಾಸು ಸಚಿವರಾಗಿ ಈ ರಾಜ್ಯದ ಬೊಕ್ಕಸವನ್ನು ಯಾವತ್ತೂ ಲವಲವಿಕೆಯಿಂದ ಹಣ ತುಂಬಿ ಇಟ್ಟಿದ್ದ ಒಂದು ಚಿಂತನೆ ಮಾಡಿದ್ದರು, ಅದನ್ನು ಯಾರೂ ತಳ್ಳಿ ಹಾಕುವಂತಿಲ್ಲ. ಎಲ್ಲಾ ಪಕ್ಷದವರು ಅವರನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ.

12.10 ಪಿ.ಎಂ

ಮಾನ್ಯ ರಾಜಶೇಖರ ಮೂರ್ತಿಯವರು ನಮ್ಮ ಶಾಸನಸಭೆಯಲ್ಲಿ ಇರಬೇಕಾಗಿತ್ತು, ಅವರು ರಾಜ್ಯಸಭೆಗೆ ಹೋದದ್ದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ಅನೇಕರು ಇಲ್ಲಿ ಹೇಳಿದ್ದು ಉಂಟು. ನನಗನಿಸುತ್ತದೆ ಅಬಕಾರಿ ದೊರೆಗಳಿಗೆ ರಾಜಶೇಖರಮೂರ್ತಿ ಸಿಂಹಸ್ವಪ್ನವಾಗಿದ್ದರು. ಇದು ಸ್ಪಷ್ಟ. ಆ ಬಗ್ಗೆ ಜೇರೆ ಮಾತಿಲ್ಲ. ಆದರೆ ಈಗ ಎಂ.ಎಸ್.ಐ.ಎಲ್.ನಿಂದ ಸಗಟು ವ್ಯಾಪಾರವನ್ನು ಸಂಪೂರ್ಣವಾಗಿ ತೆಗೆದು ಅದನ್ನು ಬೇರೆಯವರಿಗೆ, ಖಾಸಗೀಯವರಿಗೆ ಕೊಡುತ್ತೇವೆ ಎಂದು ಹೇಳುವುದು ಇದು ಸರಿಯಾದ ಮಾರ್ಗವಿಲ್ಲ. ನೇರವಾಗಿ ನಮ್ಮ ಖಜಾನೆಗೆ ಬರತಕ್ಕಂಥ ಹಣವನ್ನು, ಸರ್ಕಾರದ ಖಜಾನೆಗೆ ಬರತಕ್ಕಂಥ ಹಣವನ್ನು ಖಾಸಗೀಯವರಿಗೆ ಕೊಡತಕ್ಕಂಥ ಒಂದು ಬೆಳಕು ಇಲ್ಲಿ ಎದ್ದುಕಾಣುತ್ತದೆ. ಆದ್ದರಿಂದ ಸರ್ಕಾರ ಪ್ರಾಮಾಣಿಕವಾಗಿ ಯಾವ ಒತ್ತಡಕ್ಕೂ ಮಣಿಯದೆ ಈಗೇನು ಎಂ.ಎಸ್.ಐ.ಎಲ್.

ನಿಂದ ಸಗಟು ವ್ಯಾಪಾರವನ್ನು ಬೇರೆಯವರಿಗೆ ಕೊಡಬೇಕೆಂದು ಹೊರಟಿದ್ದಾರೆ ಅದನ್ನು ನೇರವಾಗಿ ನಿಲ್ಲಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದೊಂದೇ ಅಲ್ಲ ಎಂ.ಎಸ್.ಐ.ಎಲ್.ನಿಂದ ಈ ಒಂದು ಬಾಬಿನಲ್ಲಿ ಹಣ ಚಾಪ್ತಿ ಬಂದಿದೆ, ಜೊತೆಗೆ ಇದನ್ನು ತೆಗೆದು ಬೇರೆಯವರಿಗೆ ಕೊಟ್ಟಿರಿ ಎಂದು ಹೇಳಿದರೆ, ಅಲ್ಲಿನ ನೂರಾರು ಜನ ಸಿಬ್ಬಂದಿವರ್ಗದವರಿಗೆ ತೊಂದರೆಯಾಗುತ್ತದೆ. ಮತ್ತು ಯಾವ ಒಂದು ಪರಿಣಾಮಕಾರಿ ವ್ಯವಸ್ಥೆ ಇತ್ತು, ಆ ವ್ಯವಸ್ಥೆಗೆ ಭಂಗ ಬರುತ್ತದೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಏರ್ಗೆಯವರು ಹೇಳಿದ್ದಾರೆ ನಾನೂ ಹೇಳುತ್ತಿದ್ದೇನೆ. ಭೈರೇಗೌಡರು ಇದೇ ಸದನದಲ್ಲಿ, ಇದೇ ಸ್ಥಳದಲ್ಲಿ ಕುಳಿತು ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ನಷ್ಟವಾಗುತ್ತದೆ ಎನ್ನತಕ್ಕಂಥದ್ದನ್ನು ಅನೇಕಸಾರಿ ಹೇಳಿದ್ದುಂಟು. ಮತ್ತು ಅವರು ಅಬಕಾರಿ ಇಲಾಖೆ ಬಗ್ಗೆ ಸ್ಪಷ್ಟವಾಗಿ ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಈ ಕೆಟ್ಟ ಹೆಸರಿಗೆ ನೀವ್ಯಾಕೆ ಅವಕಾಶ ಕೊಡಬೇಕು ಎನ್ನತಕ್ಕಂಥ ಮಾತನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತಿದ್ದೇನೆ. ಆದ್ದರಿಂದ ಎಂ.ಎಸ್.ಐ.ಎಲ್.ನಿಂದ ತೆಗೆದು ಬೇರೆಯವರಿಗೆ ಕೊಡತಕ್ಕಂಥ ನಿರ್ಧಾರ ತಾವು ಮಾಡಬೇಡಿ ಎನ್ನುವುದು ನನ್ನ ಅತ್ಯಂತ ಒತ್ತಾಯ ಮತ್ತೊಮ್ಮೆ ನಾನು ಹೇಳುತ್ತಿದ್ದೇನೆ, ಪಾನನಿರೋಧದ ಬಗ್ಗೆ ಸರ್ಕಾರ ತಮ್ಮ ನಿರ್ಧಾರವನ್ನು ಪ್ರಕಟಿಸಬೇಕು ಎನ್ನತಕ್ಕಂಥದ್ದು ನನ್ನ ಒತ್ತಾಯ

+ ಶ್ರೀ ಜೆ.ಎಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ಸೇಲ್ಸ ಇಂಟರನ್ಯಾಷನಲ ಲಿಮಿಟೆಡ ಇವರು, ಸಂಪೂರ್ಣ ವಿತರಣಾ ವ್ಯವಸ್ಥೆಯನ್ನು ಅವರ ಅಧೀನದಲ್ಲಿ ಮಾಡಬೇಕು ಎಂದು ಕಾನೂನು ಮಾಡಿದ್ದು ಯಾವಾಗ? ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಅಲ್ಲ, ರಾಜ್ಯಪಾಲರ ಆಡಳಿತ ಇದ್ದಾಗ ಹಲವಾರು ಕಾರಣಗಳಿಗೋಸ್ಕರ ಈ ಅಬಕಾರಿ ಕಂಟ್ರಾಕ್ಟರ್ಸ ಏನಿದ್ದಾರೆ, ಹೊಲಸೇಲಡೀಲರ್ಸ ಏನಿದ್ದಾರೆ ಅವರಿಗೂ ರಾಜ್ಯಪಾಲರಿಗೂ ಸರಿಹೋಗಲಿಲ್ಲವೋ ಏನೋ ಗೊತ್ತಿಲ್ಲ, ಮಾಡಿದರು. ಮಾಡಿದಮೇಲೆ ಖಾಸಗೀಯವರು ಕೋರ್ಟಿಗೆ ಹೋದರು ನಂತರ ಸುಪ್ರೀಂ ಕೋರ್ಟಿಗೆ ಹೋದರು. ಸರ್ಕಾರ ಈ ವಿತರಣಾ ವ್ಯವಸ್ಥೆಯನ್ನು ತನಗೆ ತಿಳಿದವರಿಗೆ ಕೊಡುವುದಕ್ಕೆ ಅಧಿಕಾರ ಇದೆ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಅಧಿಕಾರ ಇದೆ ಎಂದು ಹೇಳಿದ್ದಾರೆಯೇ ವಿನಹ, ಇದರಿಂದ ಸರ್ಕಾರಕ್ಕೆ ಆಗತಕ್ಕಂಥ ಲುಕ್ಸಾನನ್ನು ತುಂಬುವುದು ಹೇಗೆ? ಅಥವಾ ವಿತರಣಾ ವ್ಯವಸ್ಥೆಯಲ್ಲಿ ಇರತಕ್ಕಂಥ ದೋಷಗಳೆನ್ನೆಲ್ಲ ಹೀಗೆ ನಿವಾರಣೆಮಾಡಬೇಕೆಂದು ಯಾವ ಕೋರ್ಟ್ ಹೇಳಲಿಲ್ಲ. ವಾಸ್ತವಿಕವಾಗಿ ಆದಾಯ ದೋಷಗಳನ್ನೆಲ್ಲ ಹೀಗೇ ನಿವಾರಣೆಮಾಡಬೇಕೆಂದು ಯಾವ ಕೋರ್ಟು ಹೇಳಲಿಲ್ಲ. ವಾಸ್ತವಿಕವಾಗಿ ಆದಾಯ ದೃಷ್ಟಿಯಿಂದ ನೋಡಿದಾಗ ಅಥವಾ ಈ ಸೆಕೆಂಡ್ಸ್ ಎಂದು ಏನು ಕರೆಯುತ್ತಾರ ಈ ಸೆಕೆಂಡ್ಸ್ ಮಾರುಕಟ್ಟೆಯಲ್ಲಿ ಕೂಗುವುದು ಎಂ.ಎಸ್.ಐ.ಎಲ್.ರವರೂ ಮಾರುತ್ತಿದ್ದರು, ಬೇರೆ ಖಾಸಗಿಯವರೂ ಮಾರುತ್ತಿದ್ದರು. ಇದರ ಮನಾಪಲೆಯೂ ಇರಲಿಲ್ಲ, ಇವರಿಗೆ ಯಾವರೀತಿಯೂ ಕಂಟ್ರೋಲ್ ಇರಲಿಲ್ಲ ಅಥವಾ ಆದಾಯದಲ್ಲಿ ಏನಾದರೂ ಹೆಚ್ಚಳ ಆಗಿದೆ, ಆದ್ದರಿಂದ ಇದನ್ನು ನಾವು ಕಳೆದುಕೊಳ್ಳಬಾರದು ಎಂತಲೂ ಇಲ್ಲ. ಅದಕ್ಕೋಸ್ಕರ ನಾವು ಏನು ಆಲೋಚನೆ ಮಾಡಿದೆವು. ಈಗ ಸರ್ಕಾರಿ ಮಾಲೀಕತ್ವದಲ್ಲಿ ಇರತಕ್ಕಂಥ ಕಂಪನಿಗಳನ್ನು ಏಕೆ ಮಾರುತ್ತೇವೆ? ಲುಕ್ಸಾನು ಆಗಬಾರದು

ಎಂದು. ಲಾಭ ತಂದಿದ್ದರೆ ಮಾರುವುದಕ್ಕೆ ಹೋಗುವುದಿಲ್ಲ. ಸರ್ಕಾರಿ ಮಾಲೀಕತ್ವ ಅಂತ ತಕ್ಷಣ ಅದೇ ಒಂದು ಬಹಳ ಸೀಕ್ರೇಟ್, ಅದರಿಂದಲೇ ಎಲ್ಲಾ ಫೈನಾನ್ಷಿಯಲ್ ಬೆನಿಫಿಟ್ ಇದೆ, ಆ ಸಿದ್ಧಾಂತ ಹೋಗಿ ಬಹಳ ವರ್ಷವಾಯಿತು. ವಾಟಾಳ್‌ರವರೆ, ಎಂ.ಎಸ್.ಐ.ಎಲ್.ರವರು ಮಾರುವಾಗ ಬೇರೆಯವರಿಗೂ ಮಾರಾಟ ನಡದೇ ಇತ್ತು, ಅದು ಸಂತೆ. ಯಾವುದಾದರೂ ಒಂದು ಕಡೆಯಿಂದ ನಾವು ಕರಾರುವಾಕ್ಕಾಗಿ ಚಲಾವಣೆ ಮಾಡಿದರೆ, ಆಗ ಹೇಳಬಹುದು. ಅದಕ್ಕೆ ನಾವು ಏನು ಆಲೋಚನೆ ಮಾಡಿದೆವು ಎಂದರೆ ಸುಪ್ರೀಂ ಕೋರ್ಟ್ ಆರ್ಡರ್ ಸರ್ಕಾರದ ಪರವಾಗಿಯೇ ಬಂದಿದೆ. ಸರ್ಕಾರದ ಪರವಾಗಿ ಬಂದರೂ ಇಲ್ಲಿ ಸೋರಿಕೆ ಅಥವಾ ಸೆಕೆಂಡ್ಸ್ ಮಾರ್ಕೆಟ್‌ಗೆ ಹೋಗುವುದು, ಆ ಸಾರಾಯಿ ವ್ಯವಹಾರದಲ್ಲಿರತಕ್ಕ ಲೋಪದೋಷಗಳನ್ನೆಲ್ಲ ನೋಡಿ, ಮೊದಲನೆಯದಾಗಿ ಸಾರಾಯಿಯನ್ನು ಬಂದ್ ಮಾಡಬೇಕೆನ್ನುವ ವಿಚಾರ ಹೋದವರ್ಷವೆ ನಾವು ಹೇಳಿದ್ದೆವು. ಎಂ.ಎಸ್.ಐ.ಎಲ್.ದು ಸಾರಾಯಿ ಬಗ್ಗೆ ಅಲ್ಲ, ಬೇರೆ ಐ.ಎಂ.ಎಲ್. ಎಂದು ಏನು ಇದೆ ಅದನ್ನು ಹೋಲ್‌ಸೇಲರ್ಸ್ ಯಾರೇ ಬೇಕಾದರೂ ಎಂ.ಎಸ್.ಐ.ಎಲ್.ಗೆ ಹೋಗಿ ತರಬೇಕು, ತೆಗೆದುಕೊಂಡು ಮಾಡಬೇಕು ಎಂಬುವುದು ಒಂದು ದೊಡ್ಡ ಕಾಂಪ್ಲೆಕ್ಸ್ ಆಯಿತು. ಅನಾವಶ್ಯಕವಾದಂಥ ಒಂದು ಸಂಕೀರ್ಣ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಅದು ಬಹಳ ಕಡೆ ನಮ್ಮ ಸೇಲ್ಸ್ ಅಥವಾ ನಮ್ಮ ಸರ್ಕಾರಕ್ಕೆ ಬರತಕ್ಕಂಥ ಆದಾಯ ಯಾವುದೇ ರೀತಿಯ ಎನ್‌ಕ್ರೀಜಿಂಗ್ ಆಗಿ ಇರಲಿಲ್ಲ. ಆಮೇಲೆ ಹೋಲ್‌ಸೇಲ್ ಡೀಲರ್ಸ್ ಆಗಲಿ, ರಿಟೈಲ್ ಡೀಲರ್ಸ್ ಆಗಲಿ, ರಿಟೈಲ್ ಡೀಲರ್ಸ್ ಆಗಲೀ ಯಾವುದೇ ಒಂದು ಬ್ರಾಂಡನ್ನು ಅವರವರಿಗೆ ಬೇಕಾದ ಕಡೆ ತಂದು, ಮಾರಾಟ ಮಾಡಬಹುದು. ಅದಕ್ಕೆ ನಾವು ಬಂದಮೇಲೆ ಇದು ಯಾವ ಉದ್ದೇಶಕ್ಕೋಸ್ಕರ ರಾಜ್ಯಪಾಲರ ಕಾಲದಲ್ಲಿ ಈ ಕಾನೂನನ್ನು ಮಾಡಿತ್ತೋ ಆ ಉದ್ದೇಶವೂ ಸಾಧನೆಯಾಗಲಿಲ್ಲ, ಸರ್ಕಾರಕ್ಕೂ ಆದಾಯ ಹೆಚ್ಚಲಿಲ್ಲ ಮತ್ತು ಮಾರ್ಕೆಟ್‌ನಲ್ಲಿ ಯಾವುದೇ ಕಂಟ್ರೋಲ್ ಯಾರದು ಇಲ್ಲದಂತೆ ಆಯಿತು. ಆದ್ದರಿಂದ ಅದನ್ನು ವ್ಯವಸ್ಥಗೊಳಿಸುವುದಕ್ಕೆ, ಸಾರಾಯಿಯನ್ನು ಖಾಸಗಿಯವರು ಯಾರೂ ಮಾಡುವುದಿಲ್ಲ, ಬೇರೆ ಮಧ್ಯೆಗಳನ್ನು ಮಾಡುತ್ತಾರೆ. ಸಾರಾಯಿ ಸರ್ಕಾರದ ವಶದಲ್ಲೇ ಇದ್ದದ್ದು. ಆದ್ದರಿಂದ ಸಾರಾಯಿ ಬಂದ್ ಮಾಡಬೇಕು ಎಂದ ಮೇಲೆ, ಈ ವ್ಯವಹಾರದಲ್ಲಿ ಯಾವುದೇ ರೀತಿಯ ಸಣ್ಣಪುಟ್ಟ ರಿಸ್ಟ್ರಿಕ್ಷನ್ ಇವನಿಗೆ ಅವನು ಕೇಳುವುದು, ಅವನಿಗೆ ಇವನು ಕೇಳುವುದು ಆಗಬಾರದು, ಸಾರಾಯಿ ಒಂದರಿಂದಲೇ ನಮ್ಮ ಖಜಾನೆಗೆ ಬರುವಂಥ ಸುಮಾರು 650 ಕೋಟಿ ರೂಪಾಯಿ ನಿಲ್ಲುತ್ತದೆ. ಸಾರಾಯಿ ಒಂದರಿಂದ ನಮ್ಮ ಖಜಾನೆಗೆ ಬರುವ ಹಣ ನಿಲ್ಲಿತು ಅಂದರೆ, ಈಗ ನಮ್ಮ ಸರ್ಕಾರದ ಉದ್ದೇಶ ಸ್ಪಷ್ಟ ಇದೆ ಮಾನ್ಯ ವಿರೋಧಪಕ್ಷದ ನಾಯಕರೆ, ನಾವು ಸಂಪೂರ್ಣ ಪಾನ ನಿಷೇಧವನ್ನು ತರುತ್ತೇವೆ ಎಂದು ಹೇಳಿಲ್ಲ, ಯಾವಾಗಲೂ ಹೇಳಿಲ್ಲ. ಸಂಪೂರ್ಣ ಪಾನ ನಿಷೇದ ತರಬೇಕೆಂದು ಹೇಳಿರತಕ್ಕ ರಾಜ್ಯಗಳ ಪರಿಸ್ಥಿತಿ ಏನಾಗಿದೆ, ಸ್ವಯಂ ನಾವು ನೋಡಿದ್ದೇವೆ, ನೋಡುತ್ತಾ ಇದ್ದೇವೆ ಪಾನನಿಷೇಧ ಇದ್ದಂಥ ದೇಶಗಳನ್ನೂ ನೋಡಿದ್ದೇವೆ. ಆದ್ದರಿಂದ ಮನುಷ್ಯನಿಗೆ ಇರತಕ್ಕಂಥ ಚಟವನ್ನು ಯಾವ ಸರ್ಕಾರವೂ, ಯಾವ ದೇಶದಲ್ಲೂ ಇದನ್ನು ಕಿತ್ತಾಕುವುದಕ್ಕೆ ಆಗಿಲ್ಲ. ಅದು ಜನ ಸ್ವಯಂ ತಾವಾಗಿ ತಾವು ತಿಳಿದು ಬಿಟ್ಟರೆ ಆಗಬಹುದೇ ವಿನಹ ಸರ್ಕಾರ ಕಾನೂನನ್ನು ಮಾಡಿ

ನಿಬಂಧನೆಗೆ ತಂದಿರುವುದು ಎಲ್ಲಿಯೂ ಇತಿಹಾಸದಲ್ಲಿ ನೆನಪಿಲ್ಲ. ಅದು ಆಗುವುದೂ ಇಲ್ಲ. ಹಿಂದೆ ಅಂದರೆ ಸಾರಾಯಿ ಅಂಗಡಿ ಊರ ಹೊರಗೆ ಇರುತ್ತಿತ್ತು, ಸಾರಾಯಿ ಕುಡಿದವನು ನಾಚಿಕೊಂಡು ಬಂದು ಮನೆ ಸೇರಿಕೊಳ್ಳುತ್ತಿದ್ದ. ಇತ್ತೀಚೆಗೆ ಅದು ಸ್ಯಾಚೆಟ್ಸ್ ಎಂದು ಮಾಡಿಬಿಟ್ಟರು. ಅದನ್ನು ಜೇಬಿನಲ್ಲಿ ಇಟ್ಟುಕೊಳ್ಳುವುದು ಎಲ್ಲಿ ಬೇಕಾದರೂ ಕುಡಿಯುವುದು. ಹಳ್ಳಿಗಳ ವಾತಾವರಣ ಅತ್ಯಂತ ವಿಷಪೂರಿತವಾಗಿದೆ. ಈಗ ನಮಗೆ 650 ಕೋಟಿ ರೂಪಾಯಿ ಆದಾಯ ಬರುವುದು ಹೋಗುತ್ತದೆಯೆಲ್ಲ ಎಂಬ ಅನುಮಾನ ಇದ್ದರೂ ಆ ಹಳ್ಳಿಗಳ ಕೊಡುತ್ತೇವೆ, ಕಂಟ್ರಾಕ್ಟರ್ಸ್ ತಮ್ಮ ಸೇಲ್ಸ್ ಇನ್‌ಕ್ರೀಜ್ ಮಾಡಿಕೊಳ್ಳುವುದಕ್ಕೆ ಏನೇನು ಬೇಕೋ ಎಲ್ಲಾ ರೀತಿಯಿಂದ ಹಳ್ಳಿಗಾಡುಗಳಿಗೆ ಈ ಸಾರಾಯಿಯನ್ನು ನುಗ್ಗಿಸಿದ್ದರಿಂದ ಹಳ್ಳಿಗಳ ಆರ್ಥಿಕ ಮತ್ತು ಸಾಮಾಜಿಕ, ಆ ವ್ಯಕ್ತಿಗಳ ಆರೋಗ್ಯ ಕುಟುಂಬಗಳ ಸೌಖ್ಯ ಇವೆಲ್ಲಾ ಬಹಳ ವಿಪರೀತ ಸ್ಥಿತಿಗೆ, ಚಿಂತಾಜನಕ ಸ್ಥಿತಿಗೆ ಬಂದಿರುವುದರಿಂದ ನಮ್ಮ ಸರ್ಕಾರ ಈ ತೀರ್ಮಾನ ಮಾಡಿತು. ಇದರಲ್ಲಿ ನಮ್ಮ ಸರ್ಕಾರದ ಹತೋಟಿಯಲ್ಲಿದ್ದ ಎಂಎಸ್‌ಐಎಲ್ ಅನ್ನು ಕೈಬಿಟ್ಟ ತಕ್ಷಣ ಏನೋ ಆಯಿತು ಎಂದು ಹೇಳುವುದು ಬೇಡ. ಲಿಕ್ಕರ್ ಲಾಬಿಗಳಿಗೆ ಇವರು ಈಲ್ಡ್ ಆಗಿಬಿಟ್ಟಿದ್ದಾರೆ ಎಂದು ಯಾರೋ ಹೇಳಿದರಂತೆ ನಾನು ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರೋ ಏನೋ ಹೇಳಿದರಂತೆ ಎಂದು ಏತಕ್ಕೆ ಹೇಳುತ್ತೀರಿ ನಾವೇ ಅದನ್ನು ಹೇಳಿದ್ದುದು.

ಶ್ರೀ ಜೆ.ಹೆಚ್. ಪಟೇಲ : ತಮ್ಮ ಅನುಭವದ ಮಾತನ್ನು ಹೇಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ನಮ್ಮ ಅನುಭವ ಜಾಸ್ತಿಯೋ ನಿಮ್ಮ ಅನುಭವ ಜಾಸ್ತಿಯೋ

ಶ್ರೀ ಜೆ.ಹೆಚ್. ಪಟೇಲ್ : ಲಾಬಿಗಳಿಗೆ ಈಲ್ಡ್ ಆಗುವುದು ನಮಗೆ ಗೊತ್ತಿರಲಿಲ್ಲ, ನಿಮ್ಮಿಂದ ನಾವು ಕಲಿತೆವು. ಮಾನ್ಯ ಖರ್ಗೆಯವರೇ ಈಲ್ಡ್ ಆಗುವುದು ಎಂದರೆ ಒಂದು ತಪ್ಪು ಅಭಿಪ್ರಾಯ ಇದೆ. ಈಲ್ಡ್ ಆಗುವುದು ಎಂದರೆ ನಾನು ಅವರಿಗೆ ಮಾರಾಟ ಮಾಡಿಕೊಳ್ಳುವುದು ಅಥವಾ ಅವರಿಗೆ ಬೇಕಾದ್ದು ಮಾಡಿಕೊಡುವುದರ ಎಂದು ಅಲ್ಲ. ಕೆಲವು ಸಾರಿ ಈ ಲಾಭಿಗಳು ಅಪರೇಟ್ ಮಾಡುತ್ತೇವೆ. ಗ್ರಾನೈಟ್ ಲಾಬಿಗಳು, ಲಿಕ್ಕರ್ ಲಾಬಿಗಳು, ಅಪರೇಟ್ ಮಾಡುತ್ತೇವೆ. ಇನ್ನು ಎಂಥೆಂಥ ಲಾಬಿಗಳು ಇವೆಯೋ ನನಗೆ ಗೊತ್ತಿಲ್ಲ. ಆದರೆ ಈ ವಿಷಯದಲ್ಲಿ ಮಾತ್ರ ಸರ್ಕಾರ ಸ್ಪಷ್ಟವಿದೆ. ಇದರಿಂದ ಪರಿಣಾಮ ಏನು ಆಗುತ್ತದೆ ಎಂದು ಹೇಳುತ್ತಿದ್ದೇವೆ. ಇಲ್ಲಿ ಪೂರ್ಣ ಪಾನ ನಿಷೇಧ ಸಾಧ್ಯವಿಲ್ಲ. ಸಾರಾಯಿ ಹಳ್ಳಿಗಳಿಗೆ ಹೋಗಬಾರದು, ಹಳ್ಳಿಗಳನ್ನು ಕೆಡಿಸಬಾರದು ಎನ್ನುವ ಒಂದೇ ಒಂದು ಉದ್ದೇಶದಿಂದ ಮಾಡುತ್ತಿದ್ದೇವೆ. ಈಗ ಬೆಂಗಳೂರಿನ ಪಂಚತಾರ ಹೋಟೆಲಿನಲ್ಲಿ ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡು ಸ್ಕಾಚ್ ವಿಸ್ಕಿ, ಕುಡಿಯುವವರು ಕುಡಿಯಬಹುದು. ನಾವು ಏಕೆ ಅವರಿಗೆ ಅಡ್ಡಿ ಬರಬೇಕು. ಅದರಿಂದ ನಮ್ಮ ಸರ್ಕಾರಕ್ಕೆ ತೆರಿಗೆ ಬರುವುದಾದರೆ ಬರಲಿ. ಆ ತೆರಿಗೆ ಹಣವನ್ನು ಇವರ ಆರೋಗ್ಯಕ್ಕೋ, ಹಳ್ಳಿಯಲ್ಲಿರುವ ಆಸ್ಪತ್ರೆಗೋ, ಶಾಲೆಗೋ, ಖರ್ಚು ಮಾಡೋಣ.

ನಾವು ಅದನ್ನೆಲ್ಲಾ ನಿಲ್ಲಿಸಿಬಿಡುತ್ತೇವೆಂದು ಹೇಳುವುದಿಲ್ಲ, ಸನ್ಯಾಸ ಧರ್ಮ ನಮ್ಮದಲ್ಲ. ತಮಗೆ ಹೇಳುವುದಾದರೆ, ಚೈನಾದಲ್ಲಿ ಮಾವೊತ್ಸೆತುಂಗ್‌ಗಿಂತ್ ಪವರ್‌ಫುಲ ಡಿಕ್ಟೇಟರ್ ಯಾರಿದ್ದ? ಇದು ಮಾನ್ಯ ಮೊಯಿಲಿಯವರಿಗೂ ಗೊತ್ತಿದೆ. ಮಾವೊತ್ಸತುಂಗ್ ಪ್ರೋಹಿಬಿಷನ್ ಜಾರಿಗೆ ತರಬೇಡಿ ಎಂದು ಹೇಳಿದ್ದ, ಇದು ಎಲ್ಲರಿಗೂ ಆಶ್ಚರ್ಯವಾಯಿತು. ರಾಷ್ಟ್ರದ ಅತ್ಯಂತ ಧಕ್ಷನಾಯಕನಾದ ಮಾವೊತ್ಸೆತುಂಗನು ಪ್ರೋಹಿಬಿಷನ್ ಬೇಡ ಅಫೀಮು ಮುಂತಾದ್ದು ಜಾರಿಯಲ್ಲಿ ಇರಲಿ ಎಂದು ಹೇಳುತ್ತಾನೆ, ಮನುಷ್ಯನಿಗೆ ಬೇಕಾಗಿರತಕ್ಕಂತಹ ಅತ್ಯಂತ ತೀವ್ರವಾದ ಅಪೇಕ್ಷೆ ಏನು? ಅಂದರೆ ಮನುಷ್ಯ ತನ್ನನ್ನು ತಾನು ಡೆಡಿಕೇಟ್ ಮಾಡಿಕೊಳ್ಳತಕ್ಕಂಥದ್ದು, ಒಂದು ರಿಲಿಜನ್, ಇನ್ನೊಂದು ಈ ರೀತಿಯ ಕೆಟ್ಟ ಚಟ. ಮತ್ತೊಂದು ಹೆಂಗಸು. He will dedicate himself to 3 temptations. One is religion. Second is intoxication through drinks or other sources and the third one is women. That is why he said, I have banned religion and I don't want to ban this also. ಎರಡನ್ನು ಬ್ಯಾನ್ ಮಾಡಿದರೆ ಏನು ಪರಿಸ್ಥಿತಿ ಆಗುತ್ತದೆಂದು ಆರ್ಮಿಗೆ ಗೊತ್ತು. ಎಂಬುದನ್ನು ಮಾವೊತ್ಸತುಂಗ್ ಅವರು ಒಪ್ಪಿಕೊಳ್ಳುತ್ತಾರೆ. ಮಾಧಕ ಸೇವನೆಯನ್ನು ಮಾಡತಕ್ಕಂತವರನ್ನು ಸರ್ಕಾರ ನಿಲ್ಲಿಸುವುದಕ್ಕಾಗುವುದಿಲ್ಲ, ಸ್ವಯಂ ತಮ್ಮ ಆರೋಗ್ಯ ದೃಷ್ಟಿಯಿಂದ, ಕೌಟುಂಬಿಕ ದೃಷ್ಟಿಯಿಂದ ಸ್ವಯಂ ಅವರೇ ವಿಚಾರ ಮಾಡಬೇಕು ಎನ್ನುವುದನ್ನು ಅವರೆ ಹೇಳಿದ್ದರಿಂದ ಮಾವೊತ್ಸತುಂಗ್‌ರವರ ಅನುಭವಕ್ಕಿಂತ ಹೆಚ್ಚಿನ ಅನುಭವ ನಮ್ಮದೇನಲ್ಲ, ಬೇರೆ ಸರ್ಕಾರಗಳ ವ್ಯವಸ್ಥೆಯನ್ನು ನೋಡಿದ್ದೇವೆ. ಇದರೊಳಗೆ ಯಾವುದೇ ಸರ್ಕಾರ ಮಾಡಿರತಕ್ಕಂಥ ತಪ್ಪು ಎನ್ನುವ ನಿಲುವಳಿ ಸೂಚನೆ ಅನಾವಶ್ಯಕ. ಎಲ್ಲಾ ಅಕೌಂಟ್ಸನ್ನು ತೆರೆದಿಟ್ಟಿದ್ದೇವೆ. ಇದರೊಳಗೆ ಯಾರು ಯಾವುದೇ ಲಾಬಿಗಳಿಗೆ ಒಳಗಾಗಿಲ್ಲ. ಆ ತರಹ ಏನಾದರೂ ತಪ್ಪುಗಳು ಇದ್ದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅವರಲ್ಲೇ ಇಟ್ಟುಕೊಳ್ಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ, ಏಕೆಂದರೆ ನಾನು ಏನು ಹೇಳುತ್ತೇನೆ ಅದೇ ಫೈನಲ್ ಎಂದು ಯಾವಾಗಲೂ ತಿಳಿದುಕೊಂಡೇ ಮಾತನಾಡುತ್ತಾರೆ. ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್.

ಶ್ರೀ ವೈ. ರಾಮಕೃಷ್ಣ : ಇದನ್ನು ಪರಿಶೀಲನೆ ಮಾಡುತ್ತೇವೆ. ಸರ್ಕಾರದ ಆದೇಶವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂಬ ಒಂದು ಚಕಾರ ಶಬ್ದ ಕೂಡ ಹೇಳದಿರುವುದರಿಂದ ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ತಾವು ಇಮೊತ್ತಿನ ದಿವಸ ನಮ್ಮ ಹೈಕೋರ್ಟಿನ ಮುಂದೆ ಅಫಿಡವಿಟ್ ಹಾಕಿದ್ದೀರಿ. ತಾವು ಅದರೊಳಗಡೆ ಏನು ಹೇಳಿದ್ದೀರಿ ಎಂದರೆ ಇಲ್ಲಿ ನೀವು ಹೇಳಿದಂಥ ಮಾತು ಅಲ್ಲಿ ಇಲ್ಲ. ಅಲ್ಲಿರತಕ್ಕಂಥಾದ್ದು ಏನೆಂದರೆ-

``In the counter statement filed by the Government of Karnataka before the High Court of Karnataka it has setout the object of the Amendment. The

Affidavit states, the impugned rules have been made with the sole object of preventing excise revenue and therefore, they are reasonable restrictions within the meaning of Articles 19 (6)".

ಅಂದರೆ ಇಲ್ಲಿ ರೀಜನಬಲ್ ರಿಸ್ಟ್ರಿಕ್ಷನ್ ಇಲ್ಲವೆಂದು ಡಿಸ್ಟೆಲರೀಸ್ ಮಾಲೀಕರು ಹೈಕೋರ್ಟ್ ಮುಂದೆ ಹೋಗಿದ್ದರು. ಇಲ್ಲಿ ತಾವೇನು ಹೇಳಿದ್ದೀರಿ ಎಂದರೆ ಇದು ರೀಜನಬಲ್ ರಿಸ್ಟ್ರಿಕ್ಷನ್, ಮತ್ತು ರೆವಿನ್ಯೂ ಲೀಕೇಜನ್ನು ಸ್ಟಾಪ್ ಮಾಡುವುದಕ್ಕೆ ಎಂಎಸ್ಐಎಲ್‌ಗೆ ಕೊಟ್ಟಿದ್ದು ಸರಿ, ಎನ್ನುವಂಥಾದ್ದನ್ನು ನೀವು ನಿಮ್ಮ ಅಫಿಡೆವಿಟನಲ್ಲಿ ಹೈಕೋರ್ಟ್ ಮುಂದೆ ಸ್ಪಷ್ಟವಾಗಿ ಹೇಳಿದ್ದೀರಿ. ಅಲ್ಲಿ ಹೇಳಿರುವುದು ಒಂದು, ಇಲ್ಲಿ ಮಾತನಾಡುತ್ತಿರುವುದು ಇನ್ನೊಂದು. ತಾವು 30-12- 96ರಲ್ಲಿ ಫೈನಲ್ ನೋಟಿಫಿಕೇಷನ್ ಹೊರಡಿಸಿ ರೂಲ್(3) ಕ್ಲಾಸ್ 7ಕ್ಕೆ ಏನು ತಿದ್ದುಪಡಿ ತಂದು ಪ್ರೈವೇಟ್ ಡಿಸ್ಟ್ರಿಬ್ಯೂಟರ್ಸ್‌ಗೂ ಡಿಸ್ಟ್ರಿಬ್ಯೂಟ್ ಮಾಡಲು ಲೈಸನ್ಸ್ ಕೊಡಲು ಏನು ಅವಕಾಶ ಮಾಡಿಕೊಡುತ್ತಾ ಇದ್ದೀರಿ, ಇದರಿಂದ 500 ಕೋಟಿ ರೂಪಾಯಿ ಲುಕ್ಸಾನ್ ಎನ್ನತಕ್ಕಂಥ ಮಾತನ್ನು ನಾವು ಹೇಳಿದಂತೆ, ನಿಮ್ಮ ಅಫಿಡೆವೀಟ್‌ನಲ್ಲೂ ಕೂಡ ಈ ರೀತಿ ಲೀಕೇಜ್ ಆಗುತ್ತದೆ, ಆದ್ದರಿಂದ ಇದರ ಅವಶ್ಯಕತೆ ಇದೆ ಎನ್ನತಕ್ಕಂಥ ಪ್ರಮಾಣ ಪತ್ರವನ್ನು ರಾಜ್ಯಸರ್ಕಾರ ಸಲ್ಲಿಸಿದೆ. ಇದರಲ್ಲಿ ಏನೂ ನಷ್ಟವಿಲ್ಲ, ಇದರಲ್ಲಿ ಏನು ತಪ್ಪಿಲ್ಲ, ಎಂದು ನೀವು ಮತ್ತೆ ಹೇಳುತ್ತಿದ್ದೀರಿ, ಈ ವಿಚಾರವನ್ನು ಗೌರ್ನರೆರವರ ರೀಜೇಮ್‌ನಲ್ಲಿ ಪ್ರೊನಾನ್ಸ್ ಮಾಡಿರಬಹುದು. ಆದರೆ, ಅದು ತಾ: 13-9-89ರಲ್ಲಿ ಫೈನಲ್ ನೋಟಿಫಿಕೇಷನ್ ಆಗ ಜಾರಿಗೆ ಬಂದಿತು. ಇದನ್ನು ಜಾರಿಯಲ್ಲಿ ತಂದು ಈ ಎಂ.ಎಸ್ಐ.ಎಲ್.ಗೂ ಸೋಲ್ ಏಜೆನ್ಸಿ ಏನು ಕೊಟ್ಟಿದೆ, ಅದರಿಂದ ಹೆಚ್ಚಿನ ಆದಾಯ ಬರುತ್ತದೆ ಎನ್ನತಕ್ಕಂಥ ದೃಷ್ಟಿಯಿಂದಲೇ ಹಿಂದಿನ ಸರ್ಕಾರದವರು ಕೊಟ್ಟರು, ಇವತ್ತೂ ಕೂಡ ನಿಮ್ಮ ಅಫಿಡವಿಟ್‌ನಲ್ಲಿ ನೀವೇ ಒಪ್ಪಿಕೊಂಡು ಹೈಕೋರ್ಟ್ ಮುಂದೆ, ಸುಪ್ರೀಂ ಕೋರ್ಟ್ ಮುಂದೆ ನಿಮ್ಮ ವಾದವನ್ನು ಮಂಡಿಸಿದ್ದೀರಿ. ಆರ್ಟಿಕಲ್ ನಂ.19 (5)ರ ಪ್ರಕಾರ ಅದು ಡಿಸ್ಕ್ರಿಮಿನೇಟ್ ಆಗಿಲ್ಲ, ಎಂಬುದನ್ನು ಒಪ್ಪಿದ್ದೀರಿ ಮತ್ತು ಆರ್ಟಿಕಲ್ 14ರ ಪ್ರಕಾರ ಕೂಡ ಲೀಕೇಜ್ ಇಲ್ಲ ಎನ್ನತಕ್ಕಂಥದನ್ನು ಕೂಡ ಒಪ್ಪಿಕೊಂಡಿದ್ದೀರಿ. ಇಷ್ಟಾದರೂ ಕೂಡ 500 ಕೋಟಿ ರೂಪಾಯಿ ಲೀಕೇಜ್ ಆಗುತ್ತಿರುವುದನ್ನು ನೀವು ತಡೆ ಹಿಡಿಯಲು ಪ್ರಯತ್ನ ಮಾಡುತ್ತಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ಸದನ ಸಮಿತಿಯನ್ನು ಮಾಡಿ ಎಂದು ಹೇಳಿದ್ದೆವು. ಸದನ ಸಮಿತಿ ಮಾಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಇದನ್ನು ಎಂಎಸ್ಐಎಲ್‌ಗೆ ಕೊಟ್ಟಿದ್ದೇ ತಪ್ಪೋ, ಸರಿಯೋ ಅಥವಾ ಅದನ್ನು ಕೊಡುವುದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆಯೋ ಇಲ್ಲವೋ, ಈಗ ನೀವು ಏನು ಕಾನೂನು ತಿದ್ದುಪಡಿ ಮಾಡುತ್ತಿದ್ದೀರಿ, ಇದರಿಂದ ಸರ್ಕಾರಕ್ಕೆ ಬರಬೇಕಾದ ಹಣ ಬರುತ್ತದೆಯೋ ಇಲ್ಲವೋ ಇತ್ಯಾದಿ ವಿಚಾರಗಳನ್ನು ಸಮಗ್ರವಾಗಿ ವಿಚಾರ ಮಾಡುವುದಕ್ಕಾಗಿ ಒಂದು ಸದನ ಸಮಿತಿ ಮಾಡಿ ಎಂದು ನಾನು ವಿನಂತಿ ಮಾಡಿಕೊಂಡೆ, ಅದಕ್ಕೆ ತಾವು ಏನು ಹೇಳುತ್ತಾ ಇಲ್ಲಾ. ಅದೇ ರೀತಿಯಾಗಿ ತಮಿಳುನಾಡಿನಲ್ಲಿ ಒಂದು ಮಾರ್ಕೆಟಿಂಗ್ ಕಾರ್ಪೊರೇಷನ್ ಇದೆ. ಅದರ ಪ್ರಕಾರ ನಮ್ಮಲ್ಲೂ ಕೂಡ ಮಾಡಿದರೆ, ಏನೂ ತೊಂದರೆಯಾಗುವುದಿಲ್ಲ. ಇನ್ನೂ ಹೆಚ್ಚಿನ ಹಣ ಬರುತ್ತಿದೆಯೇ ವಿನಃ ಕಡಿಮೆ ಬರುವುದಿಲ್ಲ. ಆದರೂ ಈ ಎರಡು ಮಾತನ್ನೂ ಕೂಡ ತಾವು ಒಪ್ಪುತ್ತಿಲ್ಲ. 500 ಕೋಟಿ ರೂಪಾಯಿ ನಾವು ಕಳೆದು ಕೊಳ್ಳುತ್ತಿದ್ದೇವೆ, ಆದ್ದರಿಂದ ನಾವು ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ ಪಾನ ನಿರೋಧ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ನಾನು ಸರ್ಕಾರವನ್ನು ನೇರವಾಗಿ ಒತ್ತಾಯ ಮಾಡಿದೆ, ಅದನ್ನು ತರುವುದಕ್ಕೆ ಸಾಧ್ಯವಿಲ್ಲವೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ದೇಶ ವಿದೇಶಗಳ ವಿಚಾರಗಳನ್ನು ಹೇಳಿ ಈ ಬಗ್ಗೆ ನಮ್ಮ ನಿಲುವನ್ನು ಅವರು ಒಪ್ಪುತ್ತಾ, ಇಲ್ಲ. ನಾನು ಮತ್ತೊಮ್ಮೆ ಅವರನ್ನು ಪಾನನಿರೋಧ ಜಾರಿಗೆ ತಗೊಂಡು ಬಂದು, ಗಾಂಧೀಜಿಯವರ ಒಂದು ತತ್ವ ನೀತಿಗೆ ತಾವು ಬದ್ದರಾಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಗಾಂಧೀಜಿಯವರು ಇದ್ದ ಕಾಲದಲ್ಲೇ ಸಂಪೂರ್ಣವಾಗಿ ಈ ಪಾನ ನಿರೋಧ ಮಾಡಲು ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರೇ ಒಂದು ಕಡೆ ಹೇಳಿದ್ದಾರೆ ನಾನು ಅಧಿಕಾರಕ್ಕೆ ಬಂದರೆ ಮೊಟ್ಟಮೊದಲನೆಯದಾಗಿ ಮಾಡತಕ್ಕಂಥ ಕೆಲಸ ಎಂದರೆ ಪಾನನಿರೋಧ ಜಾರಿಗೆ ತರುವುದು.

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೇ ಅವರು ಅಧಿಕಾರಕ್ಕೇ ಬರಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಆ ವಿಚಾರ ಬೇರೆ, ನಾನು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಸಂಪೂರ್ಣ ಪಾನ ನಿರೋಧ ಜಾರಿಗೆ ಆಗಬೇಕೆಂದು ನನ್ನ ಒತ್ತಾಯಕ್ಕೆ ತಾವು ಬೆಂಬಲ ಕೊಡಲಿಲ್ಲವೆಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಎಂ. ನಿವಾಸ : ಮಾನ್ಯ ಅಧ್ಯಕ್ಷರೇ ಸರ್ಕಾರದ ಬೊಕ್ಕಸಕ್ಕೆ ನಷ್ಟ ಎಂಎಸ್ಐಎಲ್ ಸಂಸ್ಥೆಯವರು ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ತಪ್ಪಿಸಿ ನೀತಿಯನ್ನು ಬದಲಾವಣೆ ಮಾಡಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ, ಆದ್ದರಿಂದ ಈ ಮಾರಾಟದ ವ್ಯವಸ್ಥೆಯನ್ನು ಎಂಎಸ್ಐಎಲ್ ಗೆ ನೀಡಬೇಕು, ಎಂಬ ನಮ್ಮ ಬೇಡಿಕೆಗೆ ಸರ್ಕಾರ ಒಪ್ಪುತ್ತಿಲ್ಲವೆಂದೂ ನಾನೂ ಕೂಡ ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಅರ್ಧ ಪಾನ ನಿರೋಧ ಮಾಡುವ ಬಗ್ಗೆ ಮತ್ತು ಹಳ್ಳಿಗಳಲ್ಲಿನ ಆರೋಗ್ಯದ ಬಗ್ಗೆ ಹೇಳಿದ್ದಾರೆ, ಬಹಳ ಗಂಭೀರವಾಗಿ ತಾವು ಚರ್ಚೆ ಮಾಡಿ ಯೋಚನೆ ಮಾಡಬೇಕು, ಅರ್ಧ ಪಾನ ನಿರೋಧ ಮಾಡುವುದು ಮೂಲಕ ಈಗಾಗಲೇ 6 ತಿಂಗಳಲ್ಲಿ ಹೋಗುವವನು 3 ತಿಂಗಳಲ್ಲಿ ಹೋಗತಕ್ಕಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಈಗ ಬಾಟ್ಲಿಂಗ್ ವ್ಯವಸ್ಥೆ ಯಾವ ಮಟ್ಟಕ್ಕೆ ಸೃಷ್ಟಿಯಾಗಿದೆ ಎಂದರೆ ಹರ್ಕ್ಯೂಲಸ್, ಯುಲಿಸಿಸ್ ಸ್ಯಾಮ್ಸನ್ ಇಪ್ಪತ್ತು ರೂಪಾಯಿ ಬಾಟ್ಲಿಂಗ್ ವ್ಯವಸ್ಥೆಯಾಗಿ ಇವೊತ್ತು ಹಳ್ಳಿಯಲ್ಲಿ ಓಡಾಡುತ್ತಿವೆ. ಒಂದು ಹೋಗಿ ಇನ್ನೊಂದು ಬರುತ್ತಿದೆ. ಆರು ತಿಂಗಳು ಜಾಕಿ ಎಂದು, ಈ ರೀತಿ ಎಲ್ಲಾ

ತರಹ ಡ್ರಿಂಕ್ಸ್‌ಗಳಿಗೆ ಕಲರ್ ಕೊಟ್ಟು ಕೊಟ್ಟು ಎಲ್ಲಾ ಹಳ್ಳಿಯಲ್ಲಿ ಓಡಾಡತಕ್ಕಂಥ ವ್ಯವಸ್ಥೆಯಾಗಿದೆ. ಆದುದರಿಂದ ಪೂರ್ಣ ಪಾನ ನಿರೋಧವನ್ನು ಮಾಡಿದರೆ, ಮಾತ್ರ ಹಳ್ಳಿಗಳು ಉದ್ಧಾರ ಆಗುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಅರ್ಧ ಮಾಡಿದರೆ ಆಗುವುದಿಲ್ಲ. ಮತ್ತು ಆರು ತಿಂಗಳಲ್ಲಿ ಸಾಯುವವನು ಮೂರು ತಿಂಗಳಿಗೆ ಹೋಗುತ್ತಾನೆ. ಆ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಆದುದರಿಂದ ದಯವಿಟ್ಟು ಸರ್ಕಾರ ಪೂರ್ಣ ಪಾನ ನಿರೋಧದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಮತ್ತು ಖಾಸಗಿಯವರಿಗೆ ಕೊಡುವ ಬದಲು ಎಂ.ಎಸ್.ಐ.ಎಲ್.ಗೆ ಮುಂದುವರೆಸತಕ್ಕಂಥ ವ್ಯವಸ್ಥೆಗೆ ಸರ್ಕಾರ ಬದ್ಧವಾಗಿರಬೇಕೆಂದು ಹೇಳಿ, ಈ ಎರಡೂ ನೀತಿಗೆ ಸರ್ಕಾರ ಬದ್ಧವಾಗಿಲ್ಲದೇ ಇರುವುದರಿಂದ ನಾನು ಕೂಡ ವಿರುದ್ಧ ಮಾಡಿ ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಸಂದರ್ಭದಲ್ಲಿ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು.)

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) : ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತ ನಿಯಂತ್ರಕ ಹಾಗೂ ಮಹಾಲೇಖಾಪಾಲಕ ರವರು ಕರ್ನಾಟಕ ಸರ್ಕಾರದ 1996ನೇ ಸಾಲಿನ ಮಾರ್ಚ್ 31ಕ್ಕೆ ಕೊನೆಗೊಂಡ ರಾಜಸ್ವ ಆದಾಯ (ನಂ.2)ಕ್ಕೆ ಸಂಬಂಧಿಸಿದ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಶೂನ್ಯ ವೇಳೆಯನ್ನು ಕೈ ಬಿಡಲಾಗಿದೆ. ನಾವು ಇನ್ನೂ ಆರು ಗಂಟೆಯವರೆಗೆ ಕುಳಿತುಕೊಂಡರೂ ಕೂಡ ನಾಡಿದ್ದುವರೆಗೆ ಕೇವಲ 440 ನಿಮಿಷಗಳು ಉಳಿಯುತ್ತವೆ ನಾವು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮುಗಿಸಬೇಕಾದರೆ. ಈಗಾಗಲೇ 40 ಜನರ ಹೆಸರಿನ ಪಟ್ಟಿಯನ್ನು ಕೊಟ್ಟಿದ್ದೀರಿ. ಇದುವರೆಗೆ ಬಿ.ಜೆ.ಪಿ.ಯ ಮೂರು ಜನ ಮಾತನಾಡಿ, 240 ನಿಮಿಷ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ಸಿನವರು ಮೂರು ಜನ ಮಾತನಾಡಿ, 85 ನಿಮಿಷ ತೆಗೆದುಕೊಂಡಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಕಾಲಾವಕಾಶ ಕೊಡಬೇಕಾಗಿದೆ. ಜನತಾದಳದವರು ಕೇವಲ 38 ನಿಮಿಷ ತೆಗೆದುಕೊಂಡಿದ್ದಾರೆ. ಇನ್ನು ಕೆಲವರಿಗೆ ಅವಕಾಶವನ್ನು ಮಾತನಾಡುವುದಕ್ಕೆ ಮಾಡಿಕೊಡಬೇಕಾಗಿದೆ. 11.10ಕ್ಕೆ ಪ್ರಾರಂಭವಾದ ನಿಲುವಳಿ ಸೂಚನೆಯ ಚರ್ಚೆ ಮುಗಿಯಲು 12.30 ಗಂಟೆಯಾಯಿತು. ಅದಕ್ಕೂ ಅವಕಾಶ ಕೊಟ್ಟು, ನಿಯಮ 69ಕ್ಕೂ ಅವಕಾಶ ಕೊಟ್ಟು, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಚರ್ಚೆಗೂ ಅವಕಾಶ ಕೊಟ್ಟರೆ, 27ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದು ಸಾಧ್ಯವಾಗದೇ ಇರತಕ್ಕಂಥ ಕೆಲಸ. ಇವೊತ್ತು ಶೂನ್ಯವೇಳೆ ತೆಗೆದುಕೊಂಡರೆ, ಇಲ್ಲಿ ಹದಿನಾರು ಜನರ ಪಟ್ಟಿ ಇದೆ. ಒಬ್ಬರಿಗೆ ಅವಕಾಶ ಕೊಟ್ಟು ಇನ್ನೊಬ್ಬರಿಗೆ ಅವಕಾಶ ಕೊಡದೇ ಇರುವುದು ಸಾಧುವಲ್ಲ. ಆ ಕಾರಣದಿಂದ ಇಂದು ಶೂನ್ಯ ವೇಳೆ ಮತ್ತು ನಿಯಮ 69 ಕೆಳಗೆ ಇರುವ